ನವಸಾಕ್ಷರ ಪುಸ್ತಕ ಮಾಲೆ ೧೨

ಶಿಶುನಾಳ ಶರೀಫ

ಬಿದರಹಳ್ಳಿ ನರಸಿಂಹಮೂರ್ತಿ




ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೧೨

ಶಿಶುನಾಳ ಶರೀಫ



ಬಿದರಹಳ್ಳಿ ನರಸಿಂಹಮೂರ್ತಿ





ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

SHISHUNALA SHAREEFA : By Bidarahalli Narasimha Murthy. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. ii + 26, Rs. 8.00


ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಮುಖಪುಟ ವಿನ್ಯಾಸ
ಕೆ. ಮಕಾಳಿ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಬೆಲೆ : ರೂ ೮.೦೦

ಮುದ್ರಕರು
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೩, ಮೊದಲನೆಯ ಮುಖ್ಯರಸ್ತೆ
ಹೊಸ ತರಗುಪೇಟೆ,
ಬೆಂಗಳೂರು-೫೬೦ ೦೦೨.




ಶಿಶುನಾಳ ಶರೀಫ

ಗುರು-ಗುರಿ

ಬನ್ನಿ ಸ್ವಾಗತ. ಈ ಹಳ್ಳಿಯ ಹೆಸರು ಶಿಶುನಾಳ. ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನಲ್ಲಿದೆ. ಈ ಹಳ್ಳಿ ಹೇಗೆ ಪ್ರಸಿದ್ಧವಾಯಿತು ಗೊತ್ತೆ? ಅಗೋ ಆ ಗಿಡಮರಗಳ ಪೊದೆಯಲ್ಲಿ ನೋಡಿ. ಪುಟ್ಟ ಕಂಬದ ಮೇಲೆ ಕುಳಿತ ಬಸವನನ್ನು ಕಂಡಿರಾ? ಅವನೆ ಶಿಶುನಾಳಾಧೀಶ. ಶಿಶುನಾಳದ ಗ್ರಾಮದೇವತೆ. ಅವನ ಪರಮ ಭಕ್ತನ ಹೆಸರು ಕೇಳಿದ್ದೀರಾ ? ಅವನೆ ಶಿಶುನಾಳ ಶರೀಫ. ಶರೀಫ ದೊಡ್ಡ ಶಿವಯೋಗಿ. ಶಿಶುನಾಳದ ಪ್ರಸಿದ್ಧಿಗೆ ಶರೀಫನ ಅನುಭಾವ ಪದಗಳೇ ಕಾರಣ.

ಇತ್ತ ಬನ್ನಿ. ಮಲ್ಲಿಗೆ ಬಳ್ಳಿ ಸುತ್ತಿಕೊಂಡಿರುವ ಬೇವಿನಮರ ನೋಡಿ. ಇದರ ನೆರಳಲ್ಲಿರುವುದೇ ಸಂತ ಶರೀಫನ ಸಮಾಧಿ. ಸದಾ ತಂಪಾಗಿ ಶಾಂತಿಯನ್ನು ಸೂಸುತ್ತಿರುತ್ತದೆ. ಊದಿನಕಡ್ಡಿಯ ಸುಗಂಧ ಯಾವಾಗಲೂ ಹೀಗೆಯೇ ಹಿತವಾಗಿರುತ್ತದೆ. ಶರೀಫನ ಸಮಾಧಿಯ ಪಕ್ಕದಲ್ಲಿರುವುದು ಅವನ ತಂದೆಯ ಸಮಾಧಿ. ತಂದೆಯ ಹೆಸರು ಹಜರತ ಇಮಾಮ ಸಾಹೇಬರು. ಶರೀಫನ ತಾಯಿಯ ಹೆಸರು ಹಜ್ಜೂಮಾ. ಶರೀಫ ಹುಟ್ಟಿದ್ದು ಸಾವಿರದ ಎಂಟುನೂರು ಹತ್ತೊಂಬತ್ತರ ಮಾರ್ಚ್ ಏಳರಂದು. ಅವನು ಹುಟ್ಟಿದ್ದು ಹುಲುಗೂರ ಸಂತ ಖಾದರ ಶಾವಲಿಯವರ ವರ ಪ್ರಸಾದದಿಂದ. ಅವನ ಪೂರ್ಣ ಹೆಸರು ಮಹಮ್ಮದ ಶರೀಫ.



ಶಿಶುನಾಳ ಶರೀಫ ಹಾಡುತ್ತಿರುವುದು

ಶರೀಫನ ಬಾಲ್ಯ ಶಿಶುನಾಳದಲ್ಲೇ ಕಳೆಯಿತು. ಅವನ ಓದು ಕನ್ನಡ ಮುಲ್ಕಿ ಪರೀಕ್ಷೆಯವರೆಗೆ ಸಾಗಿತು. ಉರ್ದು ಅವನ ತಾಯಿನುಡಿ. ಸಾಧು ಸಂತರು ಹುಡುಗ ಶರೀಫನನ್ನು ಸೆಳೆಯುತ್ತಿದ್ದರು. ಪೂಜೆ ಅವನಿಗೆ ಬಹಳ ಇಷ್ಟವಾಗುತ್ತಿತ್ತು. ಜಾತ್ರೆ, ಹಾಡು, ಕೋಲಾಟ, ನಾಟಕ ಎಂದರೆ ಪ್ರಾಣ. ರಾಮಾಯಣ, ಮಹಾಭಾರತ, ಪ್ರಭುಲಿಂಗಲೀಲೆ, ಬಯಲಾಟಗಳಲ್ಲಿ ಪಾತ್ರ ಮಾಡುತ್ತಿದ್ದ. ಮೊಹರಂ ಅಲಾವಿ ಕರ್ಬಲಾ ಮೇಳಗಳಿಗೆ ಹಾಡು ಬರೆಯುತ್ತಿದ್ದ, ಹಾಡುತ್ತಿದ್ದ.

ಶರೀಫ ಮುಂದೆ ಪ್ರಾಥಮಿಕ ಶಾಲೆಯ ಮಾಸ್ತರನಾದ. ಗುಂಜಳ, ಮಂಡಿಗನಾಳ, ಎರಿಬೂದಿಹಾಳ, ಕ್ಯಾಲಕೊಂಡ, ಪಾಣಿಗಟ್ಟಿಗಳಲ್ಲಿ ಪಾಠ ಹೇಳಿದ. 'ಸಾಲಿಯ ನೋಡಿದಿಯಾ ಸರಕಾರದ ಸಾಲಿಯ ನೋಡಿದಿಯಾ' ಎಂಬ ಪದದಲ್ಲಿ,

"ಸಾಂಬ ಸದಾಶಿವ ಧ್ಯಾನಕೆ ಇಂಬಾಗಿ
ನಂಬಿಕೊಂಡು ನಿಜ ಅಕ್ಷರ ಕಲಿಸುವ"

ಮಾಸ್ತರನ ಕೆಲಸವನ್ನು ಎತ್ತಿಹಿಡಿದಿದ್ದಾನೆ. ಸಹಜ ಶಿಕ್ಷಣ ವಿಸ್ತಾರವಾಗಬೇಕೆಂದು ಸೂಚಿಸಿದ್ದಾನೆ. ಶರೀಫನಿಗೆ ಶಿಕ್ಷಣವೆಂದರೆ ಬರಿ ಶಿಕ್ಷೆ ಆಗಿರಲಿಲ್ಲ. ಪ್ರೀತಿಯಿಂದ ಕಲಿಸುವ, ಭಕ್ತಿಯಿಂದ ಕಲಿಯುವ ಕೆಲಸವಾಗಿತ್ತು. ಗುಡಿಪುರ ಗ್ರಾಮದಲ್ಲಿ ಸೋಜಿಗದ ಸಾಲಿ ಎಂಬುದು ಅರ್ಥಪೂರ್ಣವಾಗಿದೆ. ಆದರೆ ಲೋಕಕ್ಕೇ ಶಿಕ್ಷಕನಾಗುವ ಶಕ್ತಿಯಿತ್ತು ಶರೀಫನಲ್ಲಿ. ಅವನು ಬರಿ ಸರಕಾರದ ಸಾಲಿಗೆ ತನ್ನನ್ನು ಕಟ್ಟಿಹಾಕಿಕೊಳ್ಳಲಿಲ್ಲ. ತಮ್ಮ ಮನೆಯ ಮುಂದಿನ ಕಟ್ಟೆಯನ್ನೇ ಬೋಧಾನಂದದ ಸಾಲಿಯನ್ನಾಗಿಸಿದ.

ನೀ ಕಲಿ ಸುಮ್ಮನೆ
ನಾಲ್ಕು ಅಕ್ಷರಗಳ
ಬೇಕೆನಿಸಿದ ವಸ್ತು ಸಿಗುತಿಹುದೋ

ಎಂದು ಗುರುಮಂತ್ರದ ಗುಟ್ಟನ್ನು ಶಿಷ್ಯರಿಗೆ ಹೇಳಿಕೊಟ್ಟ. ಆ ಕಟ್ಟೆಯ ಮೇಲೆ ಈಗ ಒಂದು ಮಸೀದಿಯೇ ಎದ್ದು ನಿಂತಿದೆ. ಆದರೆ ಶರೀಫನಲ್ಲಿ ಒಂದು ವಿಶೇಷ ಎಚ್ಚರ ಇತ್ತು. ಇತರರಿಗೆ ಕಲಿಸುವ ಮುಂಚೆ ತಾನು ಅಪಾರ ಅರಿವು ಸಂಪಾದಿಸಬೇಕು ಎಂದು. ಸದ್ಗುರುವಿಗಾಗಿ ಅವನ ಹುಡುಕಾಟ ನಡೆದೇ ಇತ್ತು. ಗುರು ಶಿಷ್ಯರ ಭೇಟಿಗೆ ಕಾಲ ಕೂಡಿ ಬಂತು. ಕಳಸ ಎಂಬ ಹಳ್ಳಿಯ ಬ್ರಾಹ್ಮಣನೊಬ್ಬ ಶರೀಫನಿಗೆ ಗುರುವಾದ. ಅವನ ಹೆಸರು ಗೋವಿಂದ ಭಟ್ಟ.

ಶಿಶುನಾಳಧೀಶ ಪ್ರಕಾಶ ಗೋವಿಂದನ
ಅಸಮತೇಜೋರೂಪ ಕಿರಣದೊಳಗೆ ಬಂದು
ದೊರಕಿದಾ ಗುರು ದೊರಕಿದಾ

ಎಂದು ಶರೀಫ ಭಕ್ತಿಯಿಂದ ಹಾಡಿ ಕುಣಿದಾಡಿದ. "ಗುರುವರ ಗೋವಿಂದ ಪರಮ ಗಾರುಡಿಗ" ಎಂದು ಹೊಗಳಿದ. ಗುರುವಿನಿಂದ ದೊರೆತ ಅರಿವು ಅವನ ಇಡೀ ಬದುಕಿಗೆ ಗುರಿ ತೋರಿಸಿತು.

ನನ್ನೊಳಗೆ ನಾ ತಿಳಕೊಂಡೆ
ನನಗೆ ಬೇಕಾದ ಗಂಡನ ಮಾಡಿಕೊಂಡೆ
ಗುರೂಪದೇಶ ಪಡಕೊಂಡೆ
ಗುರು ಗೋವಿಂದನ ಪಾದಾ ಹಿಡಕೊಂಡೆ

ಎಂದು ಮೈಮರೆತು ಹಾಡಿದ. ಅವನ ಕೈಗೊಂದು ಏಕತಾರಿ ಬಂದಿತು. ಅದರ ನಾದದಲ್ಲಿ, ಚಿಟಿಕೆಯ ತಾಳದಲ್ಲಿ, ಹಾಡುಗಳು ಹುಟ್ಟಿದವು. ಪದಗಳ ಮೇಲೆ ಪದಗಳು ಹುಟ್ಟಿ ಹೊಳೆಯಾಗಿ ಹರಿದವು. ತತ್ವಪದ, ಅನುಭಾವಗೀತೆ, ದಂಡಕ, ಲಾವಣಿ, ರಿವಾಯತ್ ಪದ, ಹೋಳಿಪದ, ಕಾಲಜ್ಞಾನ ಹೀಗೆ ಇಡೀ ನಾಡಿನ ಅಂತರಂಗ ಅವನ ಹಾಡಿಗೆ ಮಿಡಿಯಿತು. ಇವತ್ತಿಗೂ ಶರೀಫನ ಹಾಡುಗಳನ್ನು ಎಲ್ಲ ಕಡೆಗೂ ಹಾಡಲಾಗುತ್ತದೆ.

ಖಾದರಲಿಂಗನ ಚಾಕರಿ

ನೋಡಿ! ಹಾಡಿನ ಅಜ್ಜ ಮನೆಯಿಂದ ಹೊರಗೆ ಬರುತ್ತಾ ಇದ್ದಾನೆ. ಅವನ ಹೆಸರು ಹಜರೆ ಸಾಹೇಬ್ ಮೊಹಿಯುದ್ದೀನ್ ಸಾಹೇಬ್ ಶಿಶುನಾಳನವರ್. ಅವನು ಶಿಶುನಾಳ ಶರೀಫನ ಮರಿಮಗನಂತೆ. ಮಗಳ ಮಗಳ ಮಗ. ಅವನಿಗೇ ಸಾಕಷ್ಟು ವಯಸ್ಸಾಗಿದೆ ಈಗ. ಅಲ್ಲಿ ನೋಡಿ ಅವನ ಹಿಂದೆ ಅವನ ಮಕ್ಕಳು ಮೊಮ್ಮಕ್ಕಳು ಎಲ್ಲ ಬರುತ್ತಿದ್ದಾರೆ. ಅವರೆಲ್ಲ ಶರೀಫನ ಸಮಾಧಿ ಮುಂದೆ ಕೂತರು. ಈಗ ಶರೀಫನ ಪದಗಳ ಗಾಯನ ಶುರು ಮಾಡುತ್ತಾರೆ. ಅಗೋ ಏಕತಾರಿ ಮೀಟಲು ಶುರು ಮಾಡಿದರು. ಗೆಜ್ಜೆಬಿಲ್ಲೆಗಳ ಖಂಜರ ತಾಳಹಾಕತೊಡಗಿತು. ಆಹಾ! ಅಜ್ಜ ಆವಾಜು ತೆಗೆದ :

ನಡಿಯೋ ದೇವರ ಚಾಕರೀಗೆ। ಮುಕ್ತಿ
ಗೋಡೆಯ ಖಾದರಲಿಂಗ ನೆಲಸಿರ್ಪ ಗಿರಿಗೆ
ನಡಿಯೋ ದೇವರ ಚಾಕರೀಗೆ

ಈ ಖಾದರಲಿಂಗ ದೇವರು ಸಾಮಾನ್ಯನಲ್ಲ. ಅವನು ಏನು ಮಾಡಿದ ಕೇಳಿ:

ಬಯಲೊಳಗೆ ಬಯಲ ಪುಟ್ಟಿಸಿದ। ನಿರ್
ಬಯಲಿನೊಳಗೆ ತನ್ನಾಲಯವ ಕಟ್ಟಿಸಿದ

ಬಯಲಿಗೆ ರೂಪವಿಲ್ಲ. ಅದು ನಿರಾಕಾರ. ಆಲಯಕ್ಕೆ ರೂಪವಿದೆ. ಅದು ಸಾಕಾರ. ಆದರೆ ಖಾದರಲಿಂಗನ ಆಲಯ ಬಯಲಿನಲ್ಲೇ ಇದೆ. ಅದು ಸಾಕಾರವೂ ಹೌದು. ನಿರಾಕಾರವೂ ಹೌದು. ಈ ಖಾದರಲಿಂಗನು ಸಂಸಾರ ಸಾಗರ ದಾಟಲು ಸಹಾಯಮಾಡುತ್ತಾನೆ. ಕಾಮ ಕ್ರೋಧಗಳನ್ನು ಕಾಲಿಂದ ಒದೆಯುತ್ತ ನಡೆಯಬೇಕು. ಖಾದರಲಿಂಗನನ್ನು ಏನು ಬೇಡಬೇಕು ನಾವು? ಕೇಳಿ ಇಲ್ಲಿ:

ಜೀವ ಪರಮರೊಂದುಗೂಡಿ। ಅನು
ಭಾವದಿ ಸಾಯುಜ್ಯ ಪದವಿಯ ಬೇಡಿ

ಕಾಯಿ ಸಕ್ಕರಿ ನೀಡಿ ಪೂಜೆ ಮಾಡಿ ಊದುಕಡ್ಡಿ ಹಚ್ಚಿದರೆ ದೇವರ ಚಾಕರಿ ಮುಗಿಯಿತು. ಅವನು ತೃಪ್ತನಾದ ಎಂದು ಅರ್ಥ. ಶಿಶುನಾಳದಿಂದ ಹೊರಟು ಬಂದು ಹುಲುಗೂರ ಖಾದರಲಿಂಗನ್ನ ಕಂಡದ್ದಾಯಿತು.

ಕೇಳಿದಿರಾ? ಹಜರೆ ಅಜ್ಜನ ಅರ್ಥವನ್ನ? ಜಾತಿ ಪಾತಿ ಎಲ್ಲ ಸೈತಾನನ ಮಸಲತ್ತು. ಖಾದರಲಿಂಗ ದೇವರೊಳಗೆ ಹಿಂದೂನು ಐತಿ ಇಸ್ಲಾಮೂನು ಐತಿ. ಅವನು ಎಲ್ಲಾ ಜಾತಿಗೂ ದೇವರು. ಎಲ್ಲಾ ದೇವರಿಗಿಂತ ದೊಡ್ಡದೇವರು.

ಹ್ಞ! ಇನ್ನೊಂದು ಪದ ಎತ್ತಿಕೊಂಡ ಅಜ್ಜ. ಕೇಳಿರಿ, ಇದು ಬಹಳ ಚೆನ್ನಾಗಿದೆ. ನಿಮ್ಮನ್ನ ಕುಣಿಸಿಬಿಡುವಂತಾ ಪದ ಇದು:

ಅಲ್ಲೀಕೇರಿಗೆ ಹೋಗುನು ಬರ್ರಿರೇನ್ರೇ। ನೀವು
ಒಲ್ಲದಿದ್ರೆ ಇಲ್ಲೆ ಇರತೀರೇನ್ರೇ
ಕಲ್ಲಾ ಮಲ್ಲಾ ಕೂಡಿಕೊಂಡು ದೀವಳಿಗೆ ಹಬ್ಬಾದಲ್ಲಿ

ಉಲ್ಲಾಸದಿಂದ ಅಲ್ಲಮಪ್ರಭುವಿನ ಮರತೀರೇನ್ರೇ
ಇಲ್ಲೇ ಇರತೀರೇನ್ರೇ

ಹೆಣ್ಣು ಮಕ್ಕಳೆಲ್ಲ ಅಲ್ಲೀಕೇರಿಯ ಪಂತಿಯ ಊಟಕ್ಕೆ ಹೋಗುವುದು ರೂಢಿ. ದೀಪಾವಳಿಯ ಸಡಗರಕ್ಕೆ ಕಳಶ ಇಡುವ ಆಚರಣೆ ಇದು. ಅಲ್ಲಿಗೆ ಹೋಗುವುದೆಂದರೆ ಮನಸ್ಸು ಹೂವಾಗುತ್ತದೆ. ಅಲ್ಲಿ ಹೇಗೆ ನಡೆದುಕೊಳ್ಳಬೇಕು?

ಮಡಿಯನುಟ್ಟು ಮೀಸಲದಡಗಿ ಮಾಡಬೇಕ್ರೇ। ಅದಕೆ
ಕಡವು ಆದರೆ ನಿಮ್ಮ ಗೊಡವಿ ನಮಗ ಯಾಕ್ರೇ

ಅಲ್ಲಿ ಎಲ್ಲರೂ ಕೂಡಿ ಹುರಕ್ಕಿ ಹೋಳಿಗೆ ಹೂರಣಗಡಬು ಕಡಲಿ ಪಚ್ಚಡಿ ಕಬ್ಬಿನಂಬರ ಎಲ್ಲ ಮಾಡಬೇಕು. ಅದನ್ನ ದೇವರಿಗೆ ಎಡೆ ಇಡಬೇಕು. ದೇವರಿಗೆ ನೀಡುವಾಗ ಮನಸ್ಸು ಶುದ್ಧವಾಗಿರಬೇಕು.

ಚಟಗಿ ಮುಚ್ಚಳ ಬಾನದ ಗಡಿಗಿ ಹೆಡಿಗೆ ಜೋಕ್ರೇ। ನೀವು
ದೇವರ ಅಡಿಗೆ ದೃಢದಿ ಹೋಗಿ ಧೂಪ ಹಾಕ್ರೇ


ಭಾನಗಡಿ ಮಾಡಿಕೊಂಡವರು ದೇವರ ಹತ್ತಿರ ಬರೋದಿಲ್ಲ. ಅವರು ಬಾನದ ಗಡಿಗೆ ಹೊರಲು ಹೆದರುತ್ತಾರೆ. ದೇಹ ಶುದ್ಧ ಮನ ಶುದ್ಧ ಇರುವವರು ಹೊರುತ್ತಾರೆ. ಹರಯದ ಉಲ್ಲಾಸದಲ್ಲಿ ಹೆಣ್ಣುಮಕ್ಕಳು ಹಾದಿ ತಪ್ಪಬಾರದು. ದೇವರ ಹಾದಿಯಲ್ಲಿದ್ದರೆ ಪ್ರಸಾದವೇ ವರವಾಗಿ ಬರುತ್ತದೆ. ಅದಕ್ಕೇ ಹಾಡುತ್ತಿದ್ದಾನೆ:

ಊರ ಹೊರಗಿನ ಸಾರಿ ಮೀರಿದ ಸ್ಥಳವ ನೋಡ್ರೆ। ಅದಕ
ಸೇರದಿದ್ದರೆ ನಿಮ್ಮ ಸ್ನೇಹ ನಮಗೆ ಬ್ಯಾಡ್ರೇ
ಮೂರು ಗಿರಿಯ ಮರೆಯಲ್ಲಿರುವ
ನೀರು ತರುವ ಕೆರೆಯ ಬದಿಗೆ
ಚಾರು ತರದ ಬುರುಜಿನೊಳು ಬಾಜಾರ್ ಹೂಡ್ರೇ। ಮುಂದ
ಪಾರುಗಾಣುವಂಥ ಸುಸ್ರಿ ತಂದು ಇಡ್ರೇ

ಈ ಸಾಲುಗಳಲ್ಲಿ ಅನುಭಾವದ ಅರ್ಥ ಇದೆ. ಅನುಭಾವ ಎಂದರೆ ಏನು? ಲೋಕದ ಅನುಭವ, ಭಕ್ತಿಯ ತಿಳಿಯಾದ ಭಾವ ಒಂದಾಗಬೇಕು. ಸಣ್ಣಪುಟ್ಟ ಕೆಲಸಗಳನ್ನೂ ಪೂಜೆಯಂತೆ

ಮಾಡಬೇಕು. ಮನಸ್ಸು ಸದಾ ತೊಳೆದ ಕನ್ನಡಿಯಾಗಿರಬೇಕು. ಜೀವನದ ಚಟುವಟಿಕೆಗಳಲ್ಲಿ ಮಕ್ಕಳಂತೆ ಉತ್ಸಾಹಪಡಬೇಕು. ಈ ಅನುಭಾವವೇ ಪಾರುಗಾಣಿಸುವಂಥ ಸುಸ್ರಿ. ಸುಸ್ರಿ ಅಂದರೆ ವಸ್ತು. ಅದು ಇದ್ದರೆ ಗೆದ್ದಂತೆ.

ಅಲ್ಲೀಕೇರಿಯ ಉತ್ಸಾಹ, ಪೂಜೆ, ಊಟಕ್ಕೆ ಮುಗಿಯುವುದಿಲ್ಲ. ಅಲ್ಲಿ ಆಟವೂ ಇದೆ. ಹಾಡಿನ ನಾದಕ್ಕೆ ಕೋಲಿನ ತಾಳ ಹಾಕುವ ಕೋಲಾಟವಿದೆ. ಒಳ್ಳೆಯ ಮನಸ್ಸಿನವರು ಮಾತ್ರ ಆಟಕ್ಕೆ ಸೇರಬಹುದು. ನೂರೆಂಟು ವ್ಯಸನ ಚಟಗಳು ಇರುವವರಿಗೆ ಅವಕಾಶವಿಲ್ಲ.



ವಸುಧೆಯೊಳು ಶಿಶುನಾಳಧೀಶನ ಹೆಸರ ಹೇಳ್ರಿ। ಹೇಸಿ
ವ್ಯಸನಿಕರಾದವರೆಲ್ಲ ಇದಕ ಬರಲೇ ಬ್ಯಾಡ್ರೇ
ಕುಶಲದಿಂದ ಕೋಲ ಪಿಡಿದು
ಹಸನಾಗಿ ಪದ ನುಡಿದು
ರಸಿಕರಾದರೆಲ್ಲ ನೀವು ಕೂತು ಕೇಳ್ರೇ। ತುಸು
ಕಸುರು ಇದ್ದರೆ ಇಲ್ಲಿ ಅದನು ತಿದ್ದಿ ಹೇಳ್ರೇ

ರಸಿಕತೆಯೇ ವ್ಯಸನವಲ್ಲ. ರಸಿಕತೆ ರಗಳೆ ಅಲ್ಲ. ರಸಿಕತೆ ಎಂದರೆ ಚೆಲುವಿನ ಪೂಜೆ. ಎಲ್ಲದರ ಚೆಲುವನ್ನೂ ಭಕ್ತಿಯಿಂದ ನೋಡುವುದೇ ರಸಿಕತೆ. ಆದರೆ ವ್ಯಸನ ಹಾಗಲ್ಲ. ಅದು ಕೆಟ್ಟ ಚಟ. ಅದರಲ್ಲಿ ಚೆಲುವಿನ ಆರಾಧನೆ ಇಲ್ಲ. ಆದ್ದರಿಂದ ವ್ಯಸನಿಗಳಿಗೆ ಇಲ್ಲಿ ಪ್ರವೇಶವಿಲ್ಲ. ಅನುಭಾವದ ಕೋಲಾಟಕ್ಕೆ ಮುಗ್ಧ ಮನಸ್ಸು ಇರಬೇಕು. ಆಗ ಕಸುರು ಕಿಂಚಿತ್ತು ಇದ್ದರೂ ಯಾರೋ ತಿದ್ದುತ್ತಾರೆ. ಇಂಥ ಕೋಲಾಟದಲ್ಲಿ ಮೈಗಳ ಜೊತೆಗೆ ಮನಸ್ಸುಗಳೂ ಕುಣಿಯುತ್ತವೆ.

ಅಗೋ ಮೂರನೆ ಹಾಡು. ಹಾಡಿನಜ್ಜ ಅವನ ಮಕ್ಕಳು ಮೊಮ್ಮಕ್ಕಳ ಹುರುಪು ನೋಡಿ.

ತೂಗುತಿದೆ ನಿಜ ಬೈಲಲಿ
ಜೋಕಾಲಿ-ಜೋಲಿ-ಲಾಲಿ

ಇದು ಬರಿ ಮರಕ್ಕೆ ಕಟ್ಟಿದ ಆಟದ ಜೋಕಾಲಿಯಲ್ಲ. ಆಧಾರ ಇಲ್ಲದ ಜೋಕಾಲಿ.

ಅಂಬರದೊಳವತಾರ ತುಂಬಿ ತುಳುಕುವಂತೆ
ಸಾಂಬ ಸಾಕ್ಷಾತ್ತ ಜೋಕಾಲಿ ಜೋಲಿ ಜೋ-ಲಾಲಿ

ಯಾವ ಆಧಾರ ಇಲ್ಲದೆ ಬಯಲಲ್ಲಿ ತೂಗುತ್ತಿರುವ ಜೋಕಾಲಿಯನ್ನು ಕಂಡಿರಾ? ಇದೇ ನಿರಾಕಾರ ಖಾದರಲಿಂಗ. ಎಷ್ಟು ಅಪಾರವಾದದ್ದು. ಎಷ್ಟು ಅದ್ಭುತವಾದದ್ದು ನೋಡಿ.

ಪೊಡವಿ ಆಕಾಶ ತಾನೇಕವಾಗಿ
ಒಡೆಯ ಕರ್ತುಕನ ಜೋಕಾಲಿ ಜೋಲಿ ಜೋ-ಲಾಲಿ

ಅಬ್ಬ! ಎಂಥ ಕಲ್ಪನೆ ನಮ್ಮ ಶರೀಫನದು. ಆದರೆ ಇದು ಬರಿ ಕಲ್ಪನೆ ಅಲ್ಲ. ಇದು ಶರೀಫನಿಗಾದ ಸಾಕ್ಷಾತ್ಕಾರ. ಅವನು ಅಲ್ಲಮಪ್ರಭುವಿನ ಅನುಯಾಯಿ. ಅಲ್ಲಮನ ಹಿಂಬಾಲಕನಾಗಿ ಶರೀಫನೂ ಜ್ಯೋತಿರ್ಲಿಂಗವನ್ನು ಅರಸಿದ. ಅದನ್ನು ಕಂಡ :

ಹೊಳೆವ ಮಹಾ ಬೆಳಕಿನಲ್ಲಿ। ಕಳೆಯುಳ್ಳ
ತಿಳಿ ನೀರ ತೊಟ್ಟಿಲಲ್ಲಿ
ಇಳಿಯೊಳು ಶಿಶುನಾಳಧೀಶನ ಮನದೊಳು
ಹೊಳೆವ ಕೈವಲ್ಯ ಜೋಕಾಲಿ ಜೋಲಿ ಜೋ-ಲಾಲಿ

ಹೀಗೆ ಚಿತ್ರ ಕಟ್ಟುವ ಶರೀಫ ಸಾಮಾನ್ಯನಲ್ಲ. ಅವನೊಬ್ಬ ಅಸಾಮಾನ್ಯ ಕವಿ. ಅವನು ವರಕವಿಯೂ ಹೌದು, ರಸಋಷಿಯೂ ಹೌದು. ಮಿಂಚು ಹೊಳೆದರೆ ಅದೇ ಅವನಿಗೆ ಜ್ಯೋತಿರ್ಲಿಂಗ. ಧೋ ಧೋ ಮಳೆ ಸುರಿದರೆ ಅದೇ ತಿಳಿನೀರ ತೊಟ್ಟಿಲು. ಬೀಸುವ ರಮ ರಮ ಗಾಳಿಯೇ ಜೋಕಾಲಿಯ ಹಗ್ಗ. ಅವನಿಗಾದ ಅನುಭವ ಸಾಮಾನ್ಯವೆ?

ಶರೀಫನಿಗಾದ ಅನುಭವವನ್ನು ಅವನ ಮರಿಮಗ ಹಜರೆ ಸಾಹೇಬ ನಮಗೆ ಮಾಡಿಸುತ್ತಿದ್ದಾನೆ. ಹೇಗಿದೆ ಅವನ ಗಂಟಲು. ಅದರಲ್ಲಿ ಹುಸಿ ಇಂಪು ಇಲ್ಲ. ತಿಳಿಯ ಭಾವನೆಯಿಂದ ಬಳಸಿದರೆ ಇಂಪು ಒಳ್ಳೆಯ ಪರಿಣಾಮ ಬೀರುತ್ತದೆ. ಕೊಳೆಯ ಭಾವನೆಯಿಂದ ಬಳಸಿದರೆ ಕೆಟ್ಟ ಪರಿಣಾಮಬೀರುತ್ತದೆ. ಇಂಪಿನ ಬಗ್ಗೆ ತುಂಬ ಹುಷಾರಾಗಿರಬೇಕು ಹಜರೆ ಸಾಹೇಬ ಶರೀಫನಹಾಡುಗಳನ್ನ ಭಾವಾರ್ಥಗಳ ಸಮೇತ ಹಾಡುತ್ತಾನಲ್ಲ. ಅದು ಬಹಳ ಮುಖ್ಯ. ಶರೀಫನನ್ನು ಮುಟ್ಟಬೇಕೆಂದರೆ ಹಜರೆ ಸಾಹೇಬ ಹಾಡುವುದನ್ನೇ ಧ್ವನಿಸುರುಳಿಗೆ ಇರಿಸಿಕೊಳ್ಳಬೇಕು. ಯಾಕೆಂದರೆ ಶರೀಫನ ಆತ್ಮ ಹಜರೆ ಸಾಹೇಬನೊಳಗೆ ಕುಂತಿದೆ.

ಗುಡಗೇರಿಗೆ ಕಾಲ್ನಡಿಗೆ

ಬನ್ನಿ, ಗುಡಗೇರಿಗೆ ಹೋಗಿ ಬರೋಣ. ಬಸ್ಸು ಬೇಡ. ಬರಿ ನಾಲ್ಕೇ ಮೈಲಿ. ನಡೆದೇ ಹೋಗಿಬರೋಣ. ಶರೀಫ ಶಿಶುನಾಳದಿಂದ ಗುಡಗೇರಿಗೆ ಮೇಲಿಂದ ಮೇಲೆ ಹೋಗಿಬರುತ್ತಿದ್ದ.

ಈ ಹಾದಿಯಲ್ಲಿ ನಡೆದು ಹೋದರೆ ನಾವೂ ಅವನ ಹಾದಿತುಳಿದಂತಾಗುತ್ತದೆ. ಅವನು ತುಳಿದ ಮಣ್ಣನ್ನು ನಾವೂ ತುಳಿಯೋಣ. ಕಾಲಾಂತರದ ನೆಲದ ನೆನಪು ನಮ್ಮ ಅಂಗಾಲ ಮೂಲಕ ಹತ್ತೀತು. ಅವನ ಭಾವಗಳು ನಮ್ಮೊಳಗೂ ಹರಿದಾವು.

ಆ ಹೊಲ ನೋಡಿ. ತೆನೆತುಂಬಿ ನಿಂತಿದೆ. ಹೊಲ ಕಾಯುತ್ತಿರುವ ಹೆಣ್ಣುಮಗಳನ್ನ ನೋಡಿ. ಹಾಗೆ ನೋಡಿಯೇ ಒಮ್ಮೆ ಶರೀಫ ಬರೆದ ಹಾಡು ಇದು :

ಎಷ್ಟು ಕಾಡುತಾವು ಕಬ್ಬಕ್ಕಿ ನಾ
ಹೊಲದೊಳಗಿರುವೆನು ಒಬ್ಬಾಕಿ

ಆ ಕಡೆಯಿಂದ ಬಂದ ಮೂರು ಹಕ್ಕಿಗೆ ಕವಣೆ ಬೀಸುತ್ತಾಳೆ. ಅವು ಹಾಗೆ ಹೋಗಿ ಮತ್ತೆ ಹೀಗೆ ಹಾರಿ ಬರುತ್ತವೆ. ಅವನ್ನ ಕಾದು ಕಾದು ಅವಳಿಗೆ ಬೇಸರಕಿ. ಕಡೆಗೆ ಅದರಲ್ಲೇ ಅನುಭಾವದ ಅರ್ಥ ಅವಳಿಗೆ ಹೊಳೆಯುತ್ತದೆ.


ತುದಿ ಕಾಳ್ತಿಂದು ಹೊಡಿತಾನು ಗುರಕಿ
ಶಿಶುನಾಳಧೀಶನ ಮುದಿಹಕ್ಕಿ.

ಶರೀಫ ತಾನೇ ಹೊಲಕಾಯುವ ಹೆಣ್ಣಾಳು ಆಗಬಲ್ಲ. ಅಥವಾ ಆ ಹೆಣ್ಣಾಳಿಗೆ ತತ್ವ ಹೊಳೆಯಿಸಬಲ್ಲ.

ಬೆಳವನ ಕೂಗು ಕೇಳಿದಿರಾ? ಅಗೋ ಕುಕ್ಕುಕು, ಕುಕ್ಕುಕು, ಕೇಳಿಸಿತೇ ? ಹ್ಞಾ! ಅಲ್ಲಿನೋಡಿ, ನೀರಿನ ಬದಿಯಲ್ಲಿ ಇದಾವೆ ಬೆಳುವಗಳು. ಶರೀಫ ಬಂದಾಗಲೂ ಇದ್ದವು ಈ ಬೆಳುವಗಳು. ಅವನು ಅವನ್ನು ಕಂಡ ದಿವಸ ಗಂಭೀರ ಭಾವದಲ್ಲಿ ಇದ್ದನೆನಿಸುತ್ತದೆ. ಸಂಸಾರಿಗರ ಪಡುಪಾಟಲಿ ನೋಡಿ ಬೇಸತ್ತಿದ್ದ ಎನಿಸುತ್ತದೆ."ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ" ಎಂಬ ಅಲ್ಲಮನ ತತ್ವಾರ್ಥ ಮಥಿಸಿದ್ದ ಎನಿಸುತ್ತದೆ. ಆ ಮನೋಭಾವದ ಈ ಹಾಡು ಕೇಳಿ:

ಕುಕ್ಕುಕು ಎನುತದ ಬೆಳವಾ ಬಂದು
ಹೊಕ್ಕಿತು ಭವವೆಂಬ ದುಃಖದ ಹಳವಾ

ಕವಿಗಳಿಗೆ ಲೋಕದ ಶೋಕವೆಲ್ಲ ತಮ್ಮದೆ ಶೋಕವಾಗುತ್ತದೆ. ಬೆಳವನೆ ಮಾನವಾಕಾರ ಪಡೆದು ಬದುಕಿನ ಕಷ್ಟಸುಖ ಅನುಭವಿಸುತ್ತದೆ.



ಪಾರಿವಾಳದ ಆಟಚಂದಾ

ಸೊಕ್ಕು ಎಂಬುವ ಗಾಳಿ ಮಳೆಗೆ
ಸಿಕ್ಕು ಬಹುಪರಿ ತೊಳಲಿ ಬಳಲಿ
ಅಕ್ಕರೆಂಬುವ ಬಿಸಿಲಿನಿಂದಲಿ
ಲೆಖ್ಖವಿಲ್ಲದೆ ತಾಪಗೊಂಡು
ಕುಕ್ಕುಕು ಎನುತದ ಬೆಳವಾ

ಮಾನವನು ಕಷ್ಟಗಳ ಸಾಗರದಲ್ಲಿ ಮುಳುಗಿ ಶಿಶುನಾಳೇಶನ ಚರಣವ ಕಾಣದೆ ಸೊರಗುವನು. ಮಾನವ ಜೀವಿ ಎಂಬ ಬೆಳವನಿಗೆ ಮುಕ್ತಿಬೇಕು. ಶರೀಫನ ಪಥವೇ ಆ ಮುಕ್ತಿಪಥ. ಎಲ್ಲ ಪಂಥಗಳಿಂದ ಮುಕ್ತಿಬೇಕು. ಎಲ್ಲ ಪಂಥಗಳನ್ನ ಮೀರಿ ನಿಲ್ಲುವುದೇ ಶರೀಫನ ಪಂಥ. ಆಗಲೇ ಭವ ಹಿಂಗುವುದು.

ಶರೀಫ ದೇವರ ಹುಚ್ಚನಾಗಿದ್ದ. ಎಲ್ಲ ದೇವರುಗಳನ್ನೂ ಹಾಡಿ ಹೊಗಳುತ್ತಿದ್ದ. ಎಲ್ಲ ಜಾತ್ರೆ ಸಂತೆಗಳಿಗೆ ನಡೆದು ಹೋಗುತ್ತಿದ್ದ. ದಾರಿಯಲ್ಲಿ ಕಂಡ ಪಶುಪಕ್ಷಿಗಳಲ್ಲೂ ದೇವರನ್ನೇ ಹುಡುಕುತ್ತಿದ್ದ. ಅವನು ಆಶುಕವಿ ತಾನೆ ? ಅಲ್ಲಲ್ಲೆ ಅವುಗಳ ಬಗ್ಗೆ ಪದ ಕಟ್ಟಿ ಹಾಡಿಯೂ ಬಿಡುತ್ತಿದ್ದ. (ಆಶು ಕವಿ ಎಂದರೆ ಎಲ್ಲಿ ನಿಂತರೆ ಅಲ್ಲಿ ಪದ ಕಟ್ಟುವಾತ).

ಕುಟುಕ್ ಕುಟುಕ್ ಅನ್ನುತ್ತಿರುವ ಆ ಪಾರಿವಾಳಗಳನ್ನು ನೋಡಿ. ಮೃದುವಾದ ಪ್ರೇಮಕ್ಕೆ ಜೀವ, ಆಕಾರ ಕೊಟ್ಟಂತೆ ಇಲ್ಲವಾ ಅವು? ಶರೀಫನ ಪಾರಿವಾಳದ ಪದ ಎಷ್ಟು ಸೊಗಸಾಗಿದೆ ಗೊತ್ತ? ಕೇಳಿ ಇಲ್ಲಿ:

ಪಾರಿವಾಳದ ಆಟ ಛಂದಾ। ಅದು
ಹಾರುತ ಬಂದರೆ ಮನಸಿಗಾನಂದ

ಶರೀಫ ಲೀಲಾಭಾವದ ಅನುಭಾವಿ ಕವಿ. ಮುಗ್ಧ ಮಗುವಿನಂತೆ ನಗಬಲ್ಲ. ಕಂಡದ್ದನ್ನ ಕಂಡಷ್ಟೇ ಚೆಂದಾಗಿ ಸರಳವಾಗಿ ಬಣ್ಣಿಸಬಲ್ಲ. ಬಳಸುವ ಶಬ್ದಗಳು ಚಕ್ರದ ಗೆರೆಗಳಂತೆ ಕೆಲಸಮಾಡುತ್ತವೆ. ಶಬ್ದಗಳು ಭಾವಕ್ಕೆ ಅಡ್ಡಬೇಲಿ ಆಗುವುದಿಲ್ಲ. ಪಾರಿವಾಳವನ್ನು ಶಿವ ಹೇಗೆ ಸಲಹುತ್ತಾನೆ?

ಹಿಂದಿನ ರೆಕ್ಕೆಯ ಕಿತ್ತು। ಮುಂದೆ
ಬರುವಂಥ ಪುಚ್ಚದ ಗರಿಗಳ್ಯಾವತ್ತು

ಸಂಧಿ ಸಂಧಿಗೆ ಶುಭವಿತ್ತು। ಅದು
ಕಂದಿ ಕುಂದದಾಂಗ ಸಲುಹಲು ಗೊತ್ತು

ಜೀವನದಲ್ಲಿ ಸದಾ ಚಟುವಟಿಕೆಯಿಂದ ಇರಬೇಕು. ಆದರೆ ದೈವದ ಮೇಲೆ ಭಾರ ಹಾಕಿ ಬದುಕಬೇಕು. ಇದು ಶರೀಫನ ಶ್ರದ್ಧೆ. ಶಿಶುನಾಳಾಧೀಶ ಅವನ ಇಷ್ಟದೈವ. ಅದರ ಇನ್ನೊಂದು ರೂಪವೇ ಖಾದರಲಿಂಗ. ಈ ಸಮತೋಲ ಅವನಿಗೆ ಸಾಧ್ಯವಾದದ್ದು ಹೇಗೆ? ಗುರುಗೋವಿಂದರಿಂದ ಕಲಿತ ಯೋಗಾಭ್ಯಾಸದಿಂದ.

ಮ್ಯಾಲಕ್ಕ ಹೊಡಿ ಮೂರು ಲಾಗಾ। ಸಾಲು
ತೇಲುವ ಡವಲು ಫಲ ದೈವ ಭೋಗಾ
ಶಿಶುನಾಳಾಧೀಶನ ಯೋಗಾ। ರಸಿಕರ
ಹಾಡಿದು ಹಸನಾದ ಹೊಸಪಕ್ಷಿ ರಾಗಾ
ಪಾರಿವಾಳದ ಆಟ ಛಂದಾ

ದೇಹ ಮನಸ್ಸುಗಳನ್ನು ಬೆಸೆಯುವುದೇ ಯೋಗ. ಯೋಗಾಸನಗಳು ತಮ್ಮಷ್ಟಕ್ಕೆ ತಾವೆ ಪರಿಪೂರ್ಣವಲ್ಲ. ನಿರ್ಮಲ ಮನಸ್ಸಿನ ಧ್ಯಾನಕ್ಕೆ ಯೋಗಾಸನ ತಳಹದಿ. ಧ್ಯಾನದ ಶಿಖರದಲ್ಲಿಯೇ ದೇಹ ಮನಸ್ಸು ಒಂದಾಗುವುದು. ಅಲ್ಲೆ ಭಾವಲಿಂಗ ಪೂಜೆ. ಅಲ್ಲಿನ ಪ್ರಣವವೇ ಹಸನಾದ ಹೊಸಪಕ್ಷಿ ರಾಗ. ಅದನ್ನ ಆಲಿಸಲು ಕಲಿತವ ಭವದಿಂದ ಪಾರಾಗುತ್ತಾನೆ.

ಹೀಗೆ ಶರೀಫನ ಪದಗಳು ಅಚ್ಚರಿಯಲ್ಲಿ ಹುಟ್ಟಿ ಅರಿವಿನಲ್ಲಿ ಕೊನೆಗೊಳ್ಳುತ್ತವೆ. ದೇವರು ದೊಡ್ಡವರ ವಸ್ತು ಮಾತ್ರ ಆಗಲಿಲ್ಲ. ಕಂಡ ಕಂಡ ಕಾಯಕದ ಬಡವರ ಬಗ್ಗೆ ಬರೆದ. ಸೃಷ್ಟಿಯ ಎಲ್ಲ ಸಂಗತಿಗಳ ಬಗ್ಗೆ ಬರೆದ. ಬೆಕ್ಕು, ನಾಯಿ, ಮಂಗ, ಕೋಳಿ ಬಗ್ಗೆ ಬರೆದ. ಕಪ್ಪೆ, ಹಾವು, ಚೇಳು ಕಡೆಗೆ ತಗಣಿ ಬಗ್ಗೆಯೂ ಬರೆದ. "ತಾಳಲಾರೆ ತಗಣಿ ಕಾಟವಾ" ಎಂದು ಶಿಶುನಾಳೇಶನಿಗೆ ಮೊರೆಯಿಟ್ಟ. ಪಶುಪಕ್ಷಿ, ಕ್ರಿಮಿಕೀಟಗಳಲ್ಲೂ ಶಿಶುನಾಳಾಧೀಶನ ಪ್ರತಿಬಿಂಬ ಕಾಣುತ್ತಿದ್ದ.

ಪಕ್ಷಿ ಮಿತ್ರ ಡಾ. ಸಲೀಂ ಅಲಿಯವರ ಹೆಸರು ಕೇಳಿದ್ದೀರಾ? ಅವರಿಗಿಂತಲೂ ಹಿಂದಿದ್ದ ಶರೀಫ ಜೀವಕೋಟಿಯ ಗೆಳೆಯನಾಗಿದ್ದ.

ಶರೀಫನ ಲೋಕಾನುಭವ ಎರಡು ಮುಖ ಹೊಂದಿದೆ. ಅವೇ ನಿಸರ್ಗ ಮತ್ತು ನಾಗರಿಕತೆ. ನಿಸರ್ಗ ಅವನ ಪಾಲಿಗೆ ದೈವದ ಸೃಷ್ಟಿ. ನಾಗರಿಕತೆ ಮಾನವನ ಸೃಷ್ಟಿ. ಶರೀಫನ ಪದಗಳು ನಿಸರ್ಗ ನಾಗರಿಕತೆ ಎರಡನ್ನೂ ತಳಮುಟ್ಟ ಸೋಸುತ್ತವೆ.

ಒಂತು ನೋಡಿ! ಗುಡಗೇರಿಯ ರೈಲು ನಿಲ್ದಾಣ. ಅದು ಬ್ರಿಟಿಷರ ನೆರಳಿನಂತಿರುವ ಯಂತ್ರಾಗಾರ. ರೈಲು ಗಿರಣಿ ಕೂಡ ಶರೀಫನ ಕಾವ್ಯಕ್ಕೆ ಢಿಕ್ಕಿ ಹೊಡೆದಿವೆ. ಹುಬ್ಬಳ್ಳಿ, ಮುಂಬಯಿಗಳ ಹತ್ತಿಗಿರಣಿ ಬಟ್ಟೆಗಿರಣಿ ಅವನಲ್ಲಿ ಕೌತುಕ ಹುಟ್ಟಿಸಿವೆ. ಸಾವಿರದ ಎಂಟುನೂರಾ ಎಂಬತ್ತೇಳರಲ್ಲಿ ಹುಬ್ಬಳ್ಳಿಯಲ್ಲಿ ಒಂದು ಅರಿವೆ ಗಿರಣಿ ಆರಂಭವಾಯಿತು. ಅಂದೊಂದು ಇಂಗ್ಲೀಷ್ ಕಂಪನಿಯ ಗಿರಣಿ. ಈ ಅರಿವೆ ಗಿರಣಿ ಶರೀಫನ ಅರಿವನ್ನು ಕಡೆಯಿತು. ಅವನ ಕಾವ್ಯ ಕಲ್ಪನೆಗೆ ಹೊಸ ನೇಯ್ಗೆಯನ್ನು ನೀಡಿತು. ಅವನು ಹೀಗೆ ಹಾಡಿದ:


ಗಿರಣಿ ವಿಸ್ತಾರ ನೋಡಮ್ಮಾ
ಶರಣಿ ಕೂಡಮ್ಮಾ
ಧರಣಿಪತಿಯ ರಾಣಿ
ಕರುನಾಟ ರಾಜ್ಯಕೆ
ತರಿಸಿದ ಘನ ಚೋದ್ಯವೊ ಚೀನಾದ ವಿದ್ಯವೊ

ಗಿರಣಿಯು ವಿಕ್ಟೋರಿಯಾ ರಾಣಿ ಮಾಡಿದ ಮಾಟ ಮಂತ್ರದಂತಿದೆ. ಪಂಚಭೂತಗಳೆಲ್ಲ ಅವಳಿಗೆ ಸೆರೆಯಾಳಾಗಿ ದುಡಿಯುವಂತೆ ಕಾಣುತ್ತಿದೆ:

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚೆಂದಾಗಿ
ನೆಲದಿಂದ ಗಗನಕೆ ಮುಟ್ಟಿದಂತೆಸೆವುದು

ಆದರ ಅಕರಾಳ ವಿಕರಾಳ ಆಕೃತಿಯಿಂದ ಚೆಲುವ ಚೆನ್ನಿಗವಾದ ಕಂಭವೋ ಹೊಗಿಯ ಬಿಂಬವೋ ಕಣ್ಣಿನ ದೃಷ್ಟಿಯೆ ದಿಕ್ಕೆಟ್ಟು ಹೋಗುವಂತಿದೆ. ಆದರೆ ಶರೀಫನ ಒಳಗಣ್ಣು ತೆರೆದಿದೆ. ಅಂತರಂಗದ ಮೂರನೆ ಕಣ್ಣಿಗೆ ಬಹಿರಂಗದ ರಾಕ್ಷಸಾಕಾರದ ಭಯವಿಲ್ಲ. ಅವನ ಜೀವ ವಿಚಲಿತವಾಗುವುದಿಲ್ಲ. ತಟ್ಟನೆ ಅವನು ಗಿರಣಿಯ ಒಳಗನ್ನು ದೇಹದ ಒಳಗಿಗೆ ಹೋಲಿಸುತ್ತಾನೆ. ಅಲ್ಲೂ ನಿಲ್ಲದೆ ಒಂಬತ್ತು ಚಕ್ರಗಳ ಮೂಲಕ ಯೋಗಸಮಾಧಿಗೆ ಏರುತ್ತಾನೆ.

ಒಳಗೊಂದು ಬೇರೆ ಆಕಾರ



ಗಿರಣಿ ವಿಸ್ತಾರ ನೋಡಮ್ಮ

ತಿಳಕೋ ಚಮತ್ಕಾರ
ದಳಗಳೊಂಬತ್ತು ಚಕ್ರ ಸುಳಿವ ಸೂತ್ರಾಧಾರ
ಲಾಳಿ ಮೂರು ಕೊಳವಿಯೊಳು ಎಳೆತುಂಬುತದರೊಳು
ಅಲ್ಲಿ ಬರದಿಟ್ಟದಳಿ ಹಿಂಜೀ
ಗಾಲಿಯರಡರ ಮೇಲೆ ಮೂಲ ಬ್ರಹ್ಮದ ಶೀಲ
ನಾಡಿ ಸುಷುಮ್ನ ಕೂಡಿ
ಅಲ್ಯಾಯ್ತೋ ಕುಕ್ಕಡಿ



ದೇಶೀಯ ಬಂಧುಗಳು ಗಿರಣಿಯ ವಿಸ್ತಾರಕ್ಕೆ ಬೆಕ್ಕಸ ಬೆರಗಾಗಿದ್ದಾರೆ. ಗಿರಣಿಗಳ ಆಳ್ವಿಕೆ ದಬ್ಬಾಳಿಕೆಗೆ ಒಳಗಾಗಿದ್ದಾರೆ. ಅವರನ್ನ ಮತ್ತೆ ಸಂಘಟಿಸುವುದೇ ಶರೀಫನಿಗಿರುವ ಸವಾಲು. ಗಿರಣಿಗೆ ಗಿರಣಿಯನ್ನೂ ಮೀರಿದ ಹೊಸ ಅರ್ಥ ಕೊಡಬೇಕು. ಆರಂಭವಾಯಿತು ಶರೀಫನ ಗಾಢವಾದ ಧ್ಯಾನಯೋಗ. ಅದರೊಳಗೆ ಗಿರಣಿ ಕುಣಿದು ಕುಪ್ಪಳಿಸಿತು. ಕಡೆಗೆ ಅದರ ಹೊರ ಆಕಾರ ನೆಗೆದು ಬಿತ್ತು. ಆದರ ಒಳ ಆಕಾರ ಮಾನವ ದೇಹಕ್ಕೆ ಲಗತ್ತಾಯಿತು. ಮಾನವ ಮನಸ್ಸಿನ ವಿಕಾಸಕ್ಕೆ ಗಿರಣಿ ಒಂದು ರೂಪಕವಾಯಿತು.

ಪರಮಾನೆಂಬುವ ಪಟ್ಟೇವೋ। ಅಲ್ಲೆ
ಮಾರಾಟಕಿಟ್ಟೆವೋ
ಪರಮಾನೆಂಬುವ ಪಟ್ಟೇವೂ
ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ, ಲೋಕ ಮೆಚ್ಚಿತೋ

ಏನಿದರ ಅರ್ಥ? ಪರಮ ಎಂಬುವ ಪಟ್ಟೆಪೀತಾಂಬರ ಥಾನುಗಟ್ಟಲೆ ಬಂದಿದೆ ಮಾರುಕಟ್ಟೆಗೆ. ಈ ಬಟ್ಟೆಯನ್ನು ನೇಯ್ದು ಕೊಟ್ಟವರು ಯಾರು? ಅವನೆ ದೇವಾಂಗ ಋಷಿ. ಮೂವತ್ತಮೂರು ಕೋಟಿ ದೇವತೆಗಳೆಲ್ಲ ಬೆತ್ತಲಾಗಿ ನಾಚಿಕೆಯಿಲ್ಲದೆ ತಿರುಗುತ್ತಿದ್ದರು. ಲೋಕದ ಮಾನವನ್ನು ಕಾಪಾಡುವ ಹೊಣೆಯನ್ನು ದೇವಾಂಗ ಋಷಿ ಹೊತ್ತಿದ್ದ. ಅವನೇ ನೇಕಾರರ ಕುಲದೈವ. ಅವನು ಪರಶಿವನ ಹಣೆಗಣ್ಣಿನಿಂದ ಹುಟ್ಟಿದವನು. ಅವನು ಮೂವತ್ತು ಮೂರು ಕೋಟಿ ದೇವತೆಗಳಿಗೆ ಬಟ್ಟೆ ನೇಯ್ದು ಕೊಟ್ಟ. ಜಗತ್ತಿನ ಮಾನವನ್ನು ಕಾಪಾಡಿದ. ಈಗ ಆಧುನಿಕಯುಗದಲ್ಲಿ ಗಿರಣಿ ಬಂದಿದೆ. ಇದೇನು ದೇವಾಂಗ ಋಷಿಯಲ್ಲ. ಆದರೆ ಇದರ ಗರ್ಭದಲ್ಲಿನ ಯಂತ್ರಶಕ್ತಿಯಲ್ಲಿ ದೇವಾಂಗ ಮುನಿಯ ತಪಃಶಕ್ತಿ ಇದೆ. ಗಿರಣಿಯ ಹೊಟ್ಟೆಯಲ್ಲಿ

ದುಡಿಯುವ ಜನರ ರಟ್ಟೆಗಳೇ ದೇವಾಂಗ ಮುನಿಯ ರಟ್ಟೆಗಳು. ಅದರ ಶಕ್ತಿಯೇ ಅವನ ಶಕ್ತಿ. ಅವನೇ ಅವರ ಮೂಲಕ ಹಚ್ಚಡವನ್ನು ನೇಯಿಸಿ ಹೊಚ್ಚುತ್ತಿದ್ದಾನೆ. ಇದು ಲೋಕಮೆಚ್ಚುವ ಕಾಯಕ. ಹೀಗೆ ಆಧುನಿಕ ಬದುಕಿಗೆ ಎದುರಾದ ಸವಾಲಿಗೆ ಅನುಭಾವ ಜವಾಬುನೀಡುತ್ತದೆ. ಆಕ್ರಮಣಕಾರಿ ವಿದೇಶಿ ಸಂಸ್ಕೃತಿ ಸ್ವದೇಶಿ ಸತ್ವದ ಎದುರು ಕುಸಿಯುತ್ತದೆ. ಹೊಸ ಭಾವ ಹೊಸ ರಾಗದಲ್ಲಿ ಸ್ವದೇಶೀಯರು ಸಂಘಟನೆಗೊಳ್ಳುತ್ತಾರೆ. ಅನುಭಾವ ಹೊಸ ಆಶಾವಾದಕ್ಕೆ ಬಾಗಿಲು ತೆರೆಯುತ್ತದೆ.

ಶಿವಯೋಗಿ ಶರೀಫನು ಚರಿತ್ರೆಯ ನಾಟಕದಲ್ಲಿ ತನ್ನ ಪಾತ್ರವನ್ನ ಬೆಳಗಿಬಿಟ್ಟಿದ್ದಾನೆ. ಬ್ರಿಟಿಷ್ ಆಳ್ವಿಕೆಯಲ್ಲಿ ದಿಕ್ಕೆಟ್ಟ ಜನತೆಗೆ ಬೆಳಕಿನ ದಿಕ್ಕು ತೋರಿಸಿದ್ದಾನೆ. ಮುಂದೆ ಮಹಾತ್ಮಾ ಗಾಂಧಿ ಕಂಡ ಕನಸಿನಲ್ಲೂ ಸ್ವದೇಶಿ ಭಾರತವಿತ್ತು. ಕಾಯಕಗಳ ಹಳ್ಳಿಗಳ ಬೇಸಾಯದ ಭಾರತವಿತ್ತು. ಕೈಗಾರಿಕೆಗಳ ಭಾರತವಂತೂ ಅಲ್ಲ.

ಅಲ್ಲಿ ನೋಡಿ ಅದೇ ಗುಡಗೇರಿಯ ಸರ್ಕಾರಿ ಶಾಲೆ. ಅದೂ ಶರೀಫನ ಹಾಡಿಗೆ ವಸ್ತುವಾಗಿದೆ. ಈ ಗುಡಗೇರಿಗೆ ಗುಡಿಪುರ ಎಂದೂ ಹೆಸರಿದೆ.

ಇತ್ತ ಬನ್ನಿ, ಇದೇ ಇಲ್ಲಿನ ಕಲ್ಮಠ. ಇಲ್ಲಿನ ಸಂಗಮೇಶ್ವರ ಸ್ವಾಮಿಗಳೆಂದರೆ ಶರೀಫನಿಗೆ ಭಾರಿ ಗೌರವ. "ಅಯ್ಯನವರ ಪಾದ ಕಂಡೆ" ಎಂದು ಅವರ ಬಗ್ಗೆ ಹಾಡಿದ್ದಾನೆ. ಅವರ ಸತ್ಸಂಗ ಸಭೆಗಳಲ್ಲಿ ಭಾಗವಹಿಸಿದ್ದಾನೆ.

ಗುಡಗೇರಿ ದ್ಯಾಮವ್ವನ ಗುಡಿ ಅಂದರೆ ಇದೇ. ಇಲ್ಲಿ ಶರೀಫ ಮತ್ತು ಗುರುಗೋವಿಂದ ಭಟ್ಟರು ಕೂತು ಅನುಭಾವರಹಸ್ಯ ಮಾತಾಡಿದ್ದಾರೆ. ಜನ ಗುರು ಗೋವಿಂದ ಭಟ್ಟರನ್ನ ಜರೆಯುತ್ತಿದ್ದರು. ಸೆರೆ ಕುಡೀತಾನೆ, ಗಾಂಜಾ ಸೇದುತಾನೆ, ಸಾಬರವನ್ನ ಶಿಷ್ಯನ್ನ ಮಾಡಿಕೊಂಡಾನೆಂದು ತೆಗಳುತ್ತಿದ್ದರು. ಒಂದು ದಿನ ಮಹಾಲಕರಿ ಸಾಹೇಬರು ಚಕ್ಕಡಿಯಲ್ಲಿ ಲಕ್ಷ್ಮೇಶ್ವರಕ್ಕೆ ಹೊರಟಿದ್ದರು. ದಾರಿಯಲ್ಲಿ ಸಿಕ್ಕ ಗುರು ಶಿಷ್ಯರನ್ನ ಕುಡುಕರು ಎಂದು ಮೂದಲಿಸಿದರು. ಶರೀಫ ನೊಂದುಕೊಂಡ. "ಇರಲಿ ಬಾರೊ" ಎಂದು ಗುರುಗಳು ದ್ಯಾಮವ್ವನ ಗುಡಿಗೆ ಹೊರಟರು. ಅರ್ಧದಾರಿಯಲ್ಲೇ ಹೊಟ್ಟೆಶೂಲೆ ಬಂದು ಒದ್ದಾಡಿದನಂತೆ ಮಹಾಲಕರಿ ಸಾಹೇಬ. ವಾಪಸು ಬಂದು ಗುರುಗಳಕಾಲಿಗೆ ಬಿದ್ದನಂತೆ. ಆ ಪ್ರಸಂಗದಲ್ಲಿ ಶರೀಫನಿಂದ ಹೊರಟ ಹಾಡಿದು :

ಮಾನಾಪಮಾನ ಎರಡು ನಿನ್ನವಮ್ಮಾ ! ಎನಗೇನು

ಶ್ವಾನದಂತೆ ಬೊಗಳುತಿಹರು
ಹೀನ ಜನರೆಲ್ಲರಿವರು

ದ್ಯಾಮವ್ವನನ್ನು ಗುಡಿಪುರ ನಿಜ ವಿಷಯ ನಾಯಕಿ ಎನ್ನುತ್ತಾನೆ. "ನಿಜಾನಂದ ಬೋಧೆ ಎನಗೆ ಕುಜನರ ನಿಂದೆ ನಿನಗೆ" ಎಂದು ಹಾಡಿದ್ದಾನೆ.

ಗೋವಿಂದ ಭಟ್ಟ ಮತ್ತು ಶರೀಫ ಕೂಡಿಯೇ ತಿರುಗಾಡುತ್ತಿದ್ದರು. ಗುಡಗೇರಿಯ ಕುಂಬಾರ ಮುದುಕಪ್ಪನ ಮನೆಯಲ್ಲೇ ಅವರ ಊಟ ಉಪಚಾರ. ಕುಂಬಾರ ಮುದುಕಪ್ಪನೇ ಶರೀಫನ ಪದಗಳನ್ನು ಬರೆದಿಟ್ಟು ಕಾಪಾಡಿರುವವನು. ಶರೀಫ ಏಕತಾರಿ ಮಿಡಿಸುತ್ತ ಆನಂದಲಹರಿಯಲ್ಲಿ ಹಾಡಬೇಕು. ಮುದಕಪ್ಪ ಪ್ರಸಂಗ ಸಾಧಿಸಿ ಗಲಗಿನಿಂದ ಗೀಚಿಟ್ಟುಕೊಳ್ಳಬೇಕು. ಮುದುಕಪ್ಪನಿಗೆ ಬಸಮ್ಮ ಎಂಬ ಪುಟ್ಟ ಮಗಳಿದ್ದಳು. ಈ ಹಸುಳೆ ಶರೀಫನ ಸೇವೆ ಮಾಡುತ್ತಿದ್ದಳು. ನೀರು ನೀಡುವುದು ತಂಬಾಕಿನ ಚಿಲುಮೆ ತಂದು ಕೊಡುವುದು ಇತ್ಯಾದಿ. ಹೊಸ ಹಾಡು ಉಕ್ಕಿ ಬಂದಾಗ ಶರೀಫ ಅವಳನ್ನು ಕರೆಯುತ್ತಿದ್ದ. "ಗುಂಡೀ ಬಾ ಇಲ್ಲಿ ಕೇಳು" ಎಂದು.

ಈ ಬಸಮ್ಮ ಅಕ್ಷರ ಕಲಿತವಳಲ್ಲ. ಶಾಲೆಗೆ ಹೋದವಳಲ್ಲ. ಆದರೂ ಅಂದು ಶರೀಫ ಹಾಡಿದ ಹಾಡುಗಳನ್ನು ಚಾಚೂತಪ್ಪದೆ ಹಾಡುತ್ತಾಳೆ. ಭಾವಾರ್ಥ, ಹಾಡಿನ ಸನ್ನಿವೇಶ ಬಣ್ಣಿಸುತ್ತಾಳೆ. ಅವಳನ್ನು ಕಂಡರೆ ಶರೀಫನನ್ನೇ ಕಂಡಂತಾಗುತ್ತದೆ. ಬಸಮ್ಮ ಕಂಡಹಾಗೆ ಶರೀಫ ಸುಂದರ ಪುರುಷನಂತೆ: "ಬಣ್ಣ ತಾಮ್ರಗೆಂಪು. ದುಂಡ ಗೋಲಾಕಾರ ಮುಖ. ನೀಳವಾದ ಮೂಗು. ಅಗಲ ಕಿವಿ. ದೊಡ್ಡ ಕಣ್ಣು, ವಿಶಾಲ ಹಣೆ ಆಕರ್ಷಣೆ ಹುಟ್ಟಿಸುವ ವ್ಯಕ್ತಿ". ಬನ್ನಿ ಬಸಮ್ಮನ ಮನೆ ಕಟ್ಟೆಯ ಮೇಲೆ ಸ್ವಲ್ಪ ಕೂರೋಣ. ಇಗೊ ತೊಗೊಳ್ಳಿ. ನೀರು ಬೆಲ್ಲ ಬಂತು. ನಿಮ್ಮ ಬುತ್ತಿ ರೊಟ್ಟೀ ಇಲ್ಲೆ ಬಿಚ್ಚಿಕೊಳ್ಳಿ. ಒಳ್ಳೇ ತಣ್ಣನೆ ನೆರಳಿದೆ. ಹ್ಞಾ!. ಇನ್ನೊಂದು ಮುಖ್ಯ ಸಂಗತಿಯನ್ನೇ ಹೇಳಿಲ್ಲ. ಶರೀಫನ ಮದುವೆ ವಿಚಾರ. ಅದನ್ನಿಷ್ಟು ಹೇಳುತೀನಿ ಕೇಳಿ.

ಹೇಣ್ತಿ ಗುಣವಂತೆ

ಗುರುಗೋವಿಂದ ಭಟ್ಟ ಶರೀಫನನ್ನು ಸನ್ಯಾಸಿ ಮಾಡಲಿಲ್ಲ. ಸಮರಸದ ಸಂಸಾರ ಸುಖವೂ ಭಕ್ತಿಗೆ ಅಗತ್ಯ ಎಂದು ಬೋಧಿಸಿದನು. ತಂದೆ ತಾಯಿಯರು ಒಪ್ಪಿದ ಹೆಣ್ಣನ್ನು ಶರೀಫ

ಮದುವೆಯಾದ. ಕುಂದಗೋಳದ ನಾಯಕ ಮಂತ್ಯಾನದ ಫಕೀರ ಸಾಹೇಬರ ಮಗಳು ಫಾತಿಮಾಳನ್ನು ಕೈಹಿಡಿದ.

ಪ್ರೀತಿಸಿ ಮದುವೆಯಾಗುವುದಕ್ಕಿಂತ ಮುಖ್ಯವಾದದ್ದು ಮದುವೆಯಾದಮೇಲೆ ಪ್ರೀತಿಸುವುದು. ಪ್ರೀತಿಯನ್ನು ಕಡೆತನಕ ಜೀವಂತವಾಗಿ ಉಳಿಸಿಕೊಳ್ಳುವುದು ಮುಖ್ಯ. ಶರೀಫ-ಫಾತಿಮಾರ ದಾಂಪತ್ಯ ಜೀವಂತಿಕೆಯಿಂದ ಉರಿಯಿತು. ಅಲ್ಲಿ ಪ್ರೀತಿಯ ಅತಿರೇಕ ಇರಲಿಲ್ಲ. ಅವರ ಪ್ರೀತಿ ಹಿತವಾಗಿತ್ತು.

ನನ್ನ ಹೇಣ್ತೆ ನನ್ನ ಹೇಣ್ತೆ
ನಿನ್ನ ಹೆಸರೇನ್ಹೇಳಲಿ ಗುಣವಂತೆ

ಎಂದು ಸಂಭ್ರಮದಿಂದ ಹಾಡಿ ಹೆಂಡತಿಯ ಸುತ್ತ ಕುಣಿದ ಶರೀಫ. ಆದರೆ ಆ ಹುಡುಗಾಟದ ಕುಣಿತವೆ ಎಲ್ಲ ಅಲ್ಲ ಎಂದರಿತ. ಅವನ ದಾಂಪತ್ಯದಲ್ಲೂ ಆಧ್ಯಾತ್ಮ ಹಾಸು ಹೊಕ್ಕಿತು. ಅವನು ಅವನ ಹೆಂಡತಿ ಇಬ್ಬರೂ ಪ್ರೀತಿಯ ಅನುಭಾವಕ್ಕೇರಿದರು. ದೇಹಗಳ ಮೂಲಕವೇ ದೇಹಭಾವ ಮೀರಿನಿಂತರು.

ಘನ ಪ್ರೀತಿಲೆ ಈ ತನುತ್ರಯದೊಳು
ದಿನ ಅನುಗೂಡೊನು ಬಾ ಗುಣವಂತೆ

ಇಲ್ಲಿಂದ ಶರೀಫ ಇನ್ನೂ ಮೇಲಿನ ಮಜಲಿಗೆ ಏರಿದ. ತಾಯಿ ಹೆಂಡತಿ ಮಗಳು ಎಲ್ಲರಲ್ಲೂ ಇರುವ ಹೆಣ್ಣನ್ನು ಗುರುತಿಸಿದ. ಅವಳನ್ನ ಆದಿಶಕ್ತಿಯ ಅವತಾರವೆಂದು ಆರಾಧಿಸಿದ:

ಮೊದಲಿಗೆ ತಾಯಾದಿ ನನ್ನ ಹೇಣ್ತೆ ಮತ್ತೆ
ಸದನಕೆ ಸೊಸಿಯಾದಿ ನನ್ನ ಹೇಣ್ತೆ
ಮುದದಿಂದ ಮೋಹಿಸಿ ಮದುವ್ಯಾದವನಿಗೆ
ಬಗೆ ಬಗೆ ತಣಿಸಿದಿ ನನ್ನ ಹೇಣ್ತೆ

ತಾಯಿ ಹೆಂಡತಿ ಮಗಳು ಮೂವರು ದೇಹ ಸಂಬಂಧಿಗಳು. ಆದರೆ ಅತ್ತೆ ಅತ್ತಿಗೆ ನಾದಿನಿ ಮುಂತಾದವರು? ಅವರಲ್ಲು ಹೆಣ್ತೆಯ ಅಂದರೆ ಹೆಣ್ಣಿನ ಮೂಲರೂಪವನ್ನು ಕಾಣುತ್ತಾನೆ:

ಅತ್ತಿಗೆ ನಾದಿನಿ ನನ್ನ ಹೇಣ್ತೆ
ನಮ್ಮತ್ಯಾಗಿ ನಡಿದೀಯೆ ನನ್ನ ಹೆಣ್ತೆ

ತುತ್ತು ನೀಡಿ ಎನ್ನೆತ್ತಿ ಆಡಿಸಿದಿ
ಹೆತ್ತವ್ವನೆನಿಸಿದೆ ನನ್ನ ಹೇಣ್ತಿ


ಹೊತ್ತು ಹೊತ್ತಿಗೆ ತುತ್ತು ನೀಡುವರೆಲ್ಲರೂ ತಾಯಂದಿರೆ. ಹೆತ್ತತಾಯ ಸಮಾನರು ಅವರೆಲ್ಲ. ಉಣ್ಣಲು ನೀಡುವ ಹೆಣ್ಣುಮಕ್ಕಳನ್ನ ಗೌರವದಿಂದ ಕಾಣಬೇಕು. ಅವರನ್ನು ಕಾಣುವ ಕಣ್ಣಲ್ಲಿ ಕಸರು ಇರಬಾರದು.

ಪಕ್ಕದಲ್ಲಿ ನಿಂತೆ ನನ್ನ ಹೇಣ್ತಿ ಎನಗ
ತಕ್ಕವಳೆನಿಸಿದಿ ನನ್ನ ಹೇಣ್ತಿ
ಅಕ್ಕರದಲಿ ಅನಂತಕಾಲದಿ ನಮ್ಮ
ಅಕ್ಕನೆನಿಸಿದೆ ನೀ ನನ್ನ ಹೇಣ್ತಿ

ದೇಹಭಾವದ ಸಂಕುಚಿತ ಮನಸ್ಸಿನಿಂದ ಬಿಡಿಸಿಕೊಳ್ಳಬೇಕು. ಆಗ ಅಕ್ಕ ಎನ್ನುವುದರ ಅರಿವಾಗುತ್ತದೆ. ಆಕೆ ನಿರ್ಮಲ ಗೆಳತಿಯಾಗಬಹುದು. ಮಾರ್ಗದರ್ಶಿಯಾಗಬಹುದು. ವ್ಯಸನಗಳಿಂದ ಎತ್ತುವ ಗೆಳತಿ ಆಗಬಹುದು. ಇದು ದೇಹದ ಸಂಬಂಧವಲ್ಲ. ಅದನ್ನು ಮೀರಿ ನಿಂತ ಪ್ರೀತಿ. ಇಡೀ ಹೆಣ್ಣುಕುಲಕ್ಕೇ ಮಾದರಿಯೆನಿಸಿದ ಅಕ್ಕಮಹಾದೇವಿಯನ್ನೂ ನೆನಪಿಸುತ್ತದೆ ಈ ಪದ. ಸ್ತ್ರೀ ವಿಕಾಸದ ಮಹಾಶಿಖರ ಅಕ್ಕಮಹಾದೇವಿ. ಎಲ್ಲ ಗುಣವಂತೆಯರೂ ಅವಳನ್ನು ಹೋಲುತ್ತಾರೆ. ಇಷ್ಟೆಲ್ಲ ಹೇಳಿದಮೇಲೆ ಶರೀಫ ಮತ್ತೆ ಹೆಂಡತಿಯ ಸಾಧಾರಣ ರೂಪ ಕಾಣುತ್ತಾನೆ. ಆಗ ಆವಳು ದಾಂಪತ್ಯದ ಸಾಮರಸ್ಯದ ಸಂಕೇತವಾಗುತ್ತಾಳೆ :

ಮಂಗಳ ರೂಪಳು ನನ್ನ ಹೇಣ್ತಿ
ಕಂಗಳ ಕೊಟ್ಟಿಯೇ ನನ್ನ ಹೇಣ್ತಿ
ಶೃಂಗಾರದ ಸವಿ ಸಕ್ಕರೆ ಉಣಿಸುವ
ಅಂಗದ ಅರ್ಧ ನನ್ನ ಹೇಣ್ತಿ

ಗಂಡುಮೇಲು ಹೆಣ್ಣು ಕೀಳು ಎಂಬ ಭಾವಕ್ಕೆ ಇಲ್ಲಿ ಎಡೆಯಿಲ್ಲ. ಅದು ಹೋಗಲಿ. ಗಂಡು ಹೆಣ್ಣು ಬೇರೆ ಬೇರೆ ಎಂಬ ಕಲ್ಪನೆಯೂ ಇಲ್ಲ. ಅಂಗದ ಅರ್ಧ ಅವಳು, ಅರ್ಧ ಇವನು. ಅವರಿಬ್ಬರೂ ಕೂಡಿದಾಗಲೇ ಇಡೀ ವ್ಯಕ್ತಿತ್ವ. ಹೀಗೆ ಒಂದಾಗುವ ಸಿದ್ಧಿಯೇ ದಾಂಪತ್ಯ. ಗಂಡ ಹೆಂಡತಿ ಒಬ್ಬರನ್ನೊಬ್ಬರು ಮಗುವನ್ನಾಗಿ ಕಾಣಬೇಕು. ಜೀವಕಾರುಣ್ಯದಿಂದ ನಡೆಸಿಕೊಳ್ಳಬೇಕು. ಈ ಭಾವದೊಡನೆ ಹಾಡು ಮುಗಿಯುತ್ತದೆ :



ಶರೀಫರ ದಾಂಪತ್ಯ

ಕುಶಲದಿ ಕೂಡಿದಿ ನನ್ನ ಹೇಣ್ತಿ
ವ್ಯಸನದಿ ನಗಿಸಿದಿ ನನ್ನ ಹೇಣ್ತಿ
ಶಿಶುನಾಳಧೀಶನ ನಂಬಿದ ಭಕ್ತಿಗೆ
ಶಿಶುವಾಗಿ ತೋರಿದಿ ನನ್ನ ಹೇಣ್ತಿ

ಸುಖ, ಸಂತೃಪ್ತಿ, ಸಮರಸ ಇವು ದಾಂಪತ್ಯದ ದೀಪ್ತಿಯಂತೆ. ಶರೀಫ, ಫಾತಿಮಾ ಅಂತಹ ದಾಂಪತ್ಯವನ್ನು ಅನುಭವಿಸಿದ್ದಾರೆ. ಮುಂದಿನ ಪೀಳಿಗೆಯ ದಂಪತಿಗಳಿಗೆ ಮಾದರಿಯಾಗಿದ್ದಾರೆ. ಅವರ ಪ್ರೀತಿ ಯಾವತ್ತೂ ಒಮ್ಮುಖ ಪ್ರೀತಿಯಾಗಿರಲಿಲ್ಲ. ಅದು ಇಮ್ಮುಖದಿಂದಲೂ ಹೊಮ್ಮಿ ಇಬ್ಬರನ್ನೂ ಒಬ್ಬರನ್ನಾಗಿಸಿಬಿಡುವ ಪ್ರೀತಿಯಾಗಿತ್ತು.

'ಎಲ್ಲರಂಥವನಲ್ಲ ನನಗಂಡ' ಪದ ಇದರ ಇನ್ನೊಂದು ಮುಖ. ಹೆಂಡತಿ ಗಂಡನ ದಿಟ್ಟತನವನ್ನು ದಿಟವಾಗಿ ಒಪ್ಪಿಕೊಳ್ಳುವ ಪದ ಇದು :

ಎಲ್ಲರಂಥವನಲ್ಲ ನನಗಂಡಾ
ಬಲ್ಲಿದನು ಪುಂಡಾ
ಎಲ್ಲರಂಥವನಲ್ಲ ನನಗಂಡ

ಬೇಕಾದಲ್ಲಿ ಬಿಗಿಯಾಗಿ ಸಾಕಾದಲ್ಲಿ ಸಲಿಗೆ ನೀಡಿ ರಮಿಸುವ ಗಂಡ ಇವ. ಅವನ ಸಹವಾಸದಲ್ಲಿ ಮತ್ತೆಲ್ಲ ಮರೆತುಹೋಗುತ್ತದೆ. ಎಲ್ಲ ಸಣ್ಣತನಗಳೂ ಕೈಬಿಟ್ಟು ಹೋಗುತ್ತವೆ. ದುಃಖ ದುಮ್ಮಾನಗಳು ದೂರವಾಗಿಹೋಗುತ್ತವೆ. ಸಂಬಂಧಗಳೆಲ್ಲ ಅಸಂಬಂಧವಾಗಿ ಅವನ ಬಂಧಿಯಾಗುತ್ತಾಳೆ ಹೆಂಡತಿ. ಅದರಲ್ಲಿ ಅಗಾಧವಾದ ಸುಖವಿದೆ::

ಅಕ್ಕ ತಂಗಿಯರಾರು ಮಂದಿಗಳಾ
ಅಗಲಿಸಿದನ್ನೈವರ
ಕಕ್ಕುಲಾತಿಯ ಅಣ್ಣತಮ್ಮಗಳಾ
ನದರೆತ್ತಿ ಮ್ಯಾಲಕೆ
ನೋಡಗೊಡದೆ ಹತ್ತು ದಿಕ್ಕುಗಳಾ
ಮಾಡಿದನೆ ಮರುಳಾ
ತೆಕ್ಕೆಯೊಳು ಬಿಗಿದಪ್ಪಿ ಸುರತಾ
ನಂದ ಸುಖ ತಾಂಬೂಲ ರಸಗುಟು

ಕಿಕ್ಕಿ ಅಕ್ಕರತಿಯಲಿ ನಗುವನು ತಾ
ಬಹು ಸುಗುಣನೀತಾ
ಎಲ್ಲರಂಥವನಲ್ಲ ನನಗಂಡಾ

ಇಲ್ಲಿನ ಶಬ್ದ ಅರ್ಥಗಳು ಉತ್ಕಟ ದೇಹಸಂಬಂಧದ ಚಿತ್ರ ಕಟ್ಟುತ್ತವೆ. ಅದು ಚಿಪ್ಪು ಅಷ್ಟೆ. ನಾವು ಅಲ್ಲೇ ನಿಲ್ಲಬಾರದು. ಚಿಪ್ಪು ಒಡೆದು ಒಳಗನ್ನು ನೋಡಬೇಕು. ಅಲ್ಲಿ ಭಾವ ಲಯಗಳು ಇವೆ. ಅವು ಅರ್ಥಕ್ಕೆ ಮೀರಿದ ಅನುಭಾವ ಸುಖವನ್ನು ನಾದದಲ್ಲಿ ನುಡಿಸುತ್ತಿವೆ. ಅದನ್ನ ಕೇಳಬೇಕು. ಬಿದ್ದುಹೋಗುವ ಕಾಯದೊಳಗೆ ಎದ್ದು ನಿಂತಿರುವ ಅರಿವಿನ ಜ್ಯೋತಿಯನ್ನ ಕಾಣಬೇಕು. ಅದು ಲಿಂಗಾಂಗ ಸಾಮರಸ್ಯಕ್ಕೆ ಕರೆದೊಯ್ಯುವ ಕೈದೀವಿಗೆ. ದಾಂಪತ್ಯ ಹಸನಾದರೆ ದಂಪತಿಗಳ ಕೈಗೆ ಈ ಕೈದೀವಿಗೆ ಸಿಗುತ್ತದೆ.

ಇಂಥ ಗಂಡ ದೊರಕಿದ್ದೇ ಪುಣ್ಯ ಫಲದಿಂದ. ಕಾಂತೆ ಬಾರೆಂದು ಅವನು ಏಕಾಂತಮಂದಿರಕ್ಕೆ ಕರೆದೊಯ್ದ. ಅಲ್ಲಿ ಭ್ರಾಂತಿಯನ್ನು ಪರಿಹರಿಸಿದ. ಜೀವವನ್ನು ಶಾಂತಗೊಳಿಸಿದ. ಹಾಗಾಗಿ ಜೀವನವಿಡೀ ಶಾಂತಿರಸ ತುಂಬಿತುಳುಕಾಡಿತು. ಇನ್ನು ಹೆಚ್ಚು ಹೇಳಲು ಏನೂ ಉಳಿದಿಲ್ಲ. ಎಲ್ಲವೂ ಶಿಶುನಾಳಾಧೀಶನ ಕರುಣೆ.

'ಬಾಲೆ ನೀಲಾಂಜನ ಬೆಳಗು ಬಾ' ಎನ್ನುತ್ತಾನೆ ಶರೀಫ ಹೆಂಡತಿಯನ್ನು ಕುರಿತು. ಲೀಲಾನಂದನಾದ ಶಿಶುನಾಳೇಶನ ಪೂಜೆಗೆ ಕರೆಯುತ್ತಾನೆ. ವಿಚಾರ ಮಂತ್ರಾಕ್ಷರ ಜಪಿಸಲು ಹೇಳಿಕೊಡುತ್ತಾನೆ. 'ವಿರೂಪಾಕ್ಷ ಲಿಂಗವಿದ್ದ ಹಂಪಿ ನೋಡೋಣು ಬಾರೆ ಇಬ್ಬರು ಕೂಡಿ' ಎನ್ನುತ್ತಾನೆ. ಅವರು ಬಹಳ ಒಳ್ಳೆಯ ಗೆಳೆಯಗೆಳತಿಯರೂ ಆಗಿದ್ದರು. ಅವರ ಜೀವಗಳು ಅಂಟಿದ ನಂಟು ನಡುವೆಯೇ ಇಲ್ಲವಾಯಿತು. ಆತ್ಮಗಳು ಒಂದಾಗಿಹೋಗಿದ್ದರೂ ಜೀವಗಳು ಬೇರ್ಪಟ್ಟವು.

ಒಮ್ಮೆಲೇ ಸುಂದರವಾದ ಕನಸಿನಿಂದ ಎಚ್ಚೆತ್ತವನಂತೆ ಶರೀಫ ಮೊರೆಯಿಟ್ಟ :

ಮೋಹದ ಹೆಂಡತಿ ಸತ್ತ ಬಳಿಕ
ಮಾವನ ಮನೆಯ ಹಂಗಿನ್ಯಾಕೊ
ಸಾವು ನೋವಿಗೆ ತರುವ ಬೀಗನ
ಮಾತಿನ ಹಂಗೊಂದೆನಗ್ಯಾಕೋ

ಪ್ರೇಮದ ಇನಿಯಳ ಸಾವು ಅವನನ್ನು ತಲ್ಲಣಗೊಳಿಸಿತು. ಅವಳ ಮಧುರ ನೆನಪು ಅವನ ಮೈಮನಸ್ಸುಗಳಿಗೆ ಕಿಚ್ಚಿಟ್ಟಿತು. ದೇಹ ದುಃಖದ ಭೂಮಿಗೆ ಬಿದ್ದರೆ ಆತ್ಮ ಅನುಭಾವದ ಆಕಾಶಕ್ಕೇರಿತು. ಆಗ ಹೀಗೆ ಹಾಡಿಕೊಂಡ :

ಖಾಂಡ ವನದಿ ಸೋಂಕಿ ತನ್ನ ಮೈಯೊಳುತಾಕಿ
ಭಂಡೆದ್ದು ಹೋಗುವದು ಭಯವ್ಯಾಕೋ
ಮಂಡಲ ನಾಡಿಗೆ ಪಿಂಡದ ಗೂಡಿಗೆ
ಚಂಡಿತನದಿ ಚರಿಸ್ಯಾಡುವುದ್ಯಾಕೋ

ಈ ಬೆಂಕಿಯ ಬೇಗೆಯನ್ನು ಮೀರಿ ವಿರಾಗಿಯಾಗುತ್ತಾನೆ ಶರೀಫ. ಹೆಂಡತಿ ಸಾಯುವ ಹೊತ್ತಿಗೆ ಸರಿಯಾಗಿ ಅವಳ ಊರಾದ ಕುಂದಗೋಳದಲ್ಲಿರುತ್ತಾನೆ. ಅದೆ ಒಂದು ವ್ಯಂಗ್ಯವಾಗಿ ನಿಲ್ಲುತ್ತದೆ. ನವಲಗುಂದದ ನಾಗಲಿಂಗನೊಡನೆ ಕುಂದಗೋಳಕ್ಕೆ ಬಂದಾಗ ಸಾವಿನ ಸುದ್ದಿ ಸಿಗುತ್ತದೆ.

ನವಲಗುಂದದ ನಾಗಲಿಂಗಪ್ಪ, ಹಠಯೋಗಿ ಎಂದು ಹೆಸರಾದವ. ಶರೀಫ ಶಿವಯೋಗಿ. ಇಬ್ಬರ ಮಾರ್ಗಗಳೂ ಬೇರೆಬೇರೆ. ಆದರೂ ಇಬ್ಬರೂ ಪರಸ್ಪರ ಒಡನಾಡುವ ಆತ್ಮೀಯ ಮಿತ್ರರು. ಒಮ್ಮೆ ಶರೀಫನ ಕೈಯಲ್ಲಿನ ಕೋಲು ಕೆಳಗೆ ಬಿತ್ತಂತೆ. ಆಗ ನಾಗಲಿಂಗಪ್ಪ ಹೀಗೆ ಅಂದರಂತೆ : "ಇದ್ದೊಂದು ಮಗಳಿತ್ತು. ಅದೂ ಹೋಯ್ತು ಬಿಡು." ಮಗಳು ಕಾಲರಾದಿಂದ ತೀರಿಕೊಂಡ ಸುದ್ದಿ ಬಂತಂತೆ ಶರೀಫನಿಗೆ.

ಶರೀಫನ ಹೆಂಡತಿ ತೀರಿಕೊಂಡ ದಿನವೂ ಹೀಗೆಯೇ ಆಯಿತಂತೆ. ನಾಗಲಿಂಗಪ್ಪ ಶರೀಫನ ತಲೆಯ ಮೇಲಿನ ರುಮಾಲು ಕೆಡವಿದನಂತೆ. "ಹೇಣ್ತಿ ಸತ್ತಿದ್ದು ನನಗೆ ಗೊತ್ತಿಲ್ಲೇನು?" ಅಂದನಂತೆ. ಮಾವನ ಮನೆಯ ಆಳು ಸಾವಿನ ಸುದ್ದಿ ತಂದನಂತೆ. ಎದುರಿಗೆ ಹೇಳಲಾರದೆ ನಿಂತನಂತೆ. ಶರೀಫ ಹೀಗೆ ಹೇಳಿಬಿಟ್ಟನಂತೆ :

"ಬಿಡಲೇ ನಿನ್ನೆ ಹೋಗಾಗ, ಹೋಗತೀನಿ ಅಂತ ಹೇಳಿ ಹೋಗ್ಯಾಳ. ಈಗ ಬಂದೀಯಲೆ ಹುಚ್ಚಾ".

ಈ ಸಂಗತಿಗಳೆಲ್ಲ ಅನುಭಾವಿಗಳ ಜೀವನದ ರೀತಿಯನ್ನು ಚಿತ್ರಿಸುತ್ತವೆ.

ಮುಂದೆ ಶರೀಫ ನವಲಗುಂದದ ನಾಗಲಿಂಗಪ್ಪ ಗರಗದ ಮಡಿವಾಳಪ್ಪರ ಜೊತೆ ಹಿಡಿದ. ಮೂವರೂ ತ್ರಿಮೂರ್ತಿಗಳಂತೆ ನಾಡಿನಲ್ಲಿ ಸಂಚರಿಸಿದರು. ಮುರಗೋಡದ ಬಳಿಯ ಸಿದ್ಧನಗವಿಯಲ್ಲಿ ಅಧ್ಯಾತ್ಮ ಯೋಗಸಾಧನೆಗಳನ್ನು ನಡೆಸುತ್ತಿದ್ದರು. ಕಾಶಿಯ ತನಕವೂ ಮೂವರೂ ಕೂಡಿ ಹೋಗಿದ್ದರೆಂದು ಪುರಾಣಗಳು ಹೇಳುತ್ತವೆ.

ಪದವ ಬ್ಯಾಗನೆ ಕಲಿ ಕಲಿ

ಇದೇನು ಮೂಕರಾಗಿ ಕೂತುಬಿಟ್ಟಿರಲ್ಲ. ಏಳಿ ಹೋಗೋಣ ಹೊತ್ತಾಗುತ್ತದೆ. ಇನ್ನು ಏನಂದಿರಿ ? ಏಳಲು ಮನಸ್ಸೇ ಬರುತ್ತಿಲ್ಲವಾ ? ಹೌದು ಈ ಕಟ್ಟೆಯ ಮಹಿಮೆಯೇ ಅಂಥಾದ್ದು. ಶರೀಫನ ಚೇತನದ ತರಂಗಗಳು ಇಲ್ಲೇ ಇವೆ. ಅವು ನಮ್ಮನ್ನೆಲ್ಲ ಶರೀಫನ ಬದುಕಿನ ಘಟನೆಗಳೊಳಗೆ ಸೆಳೆದು ಒಯ್ದುಬಿಡುತ್ತವೆ.

ಮುಂದೆ ಶರೀಫ ಪದಗಳ ರಚನೆಗೆ ತನ್ನನ್ನೇ ಸಂಪೂರ್ಣ ಕೊಟ್ಟುಕೊಂಡ. ಎಲ್ಲ ವಿಷಯಗಳ ಮೇಲೆ ಪದಕಟ್ಟಿದ. ಪದದ ಬಗ್ಗೆಯೆ ಪದ ಕಟ್ಟಿ ಹಾಡಿದ :

ಪದವ ಬ್ಯಾಗನೆ ಕಲಿ ಕಲಿ ! ಶಿವ
ಶರಣರ ಹೃದಯದ ಕೀಲಿ

ಎಂದು ಗೆಳೆಯರನ್ನು ಗರತಿಯರನ್ನು ಒತ್ತಾಯಿಸಿದ. ತನ್ನ ಪದಗಳ ಮಹತ್ವವನ್ನ ಹೀಗೆ ವಿವರಿಸಿದ :

ಗಣ ನೇಮದ ಗುಣಗೆಡಿಸುವ ಪದವು
ತುಣುಕು ಶಾಸ್ತ್ರಕೆ ಮಣಿಯದ ಪದವು
ಗುಣಿಸಿಕೊಂಡು ಸಂಗೀತ ಸ್ವರಂಗಳ
ಎಣಿಸಿ ಎಣಿಸಿ ಕುಣಿಸ್ಯಾಡುವ ಕುಶಲ
ಪದವ ಬ್ಯಾಗನೆ ಕಲಿ ಕಲಿ

ಅವನ ಪದಗಳು ಅಂತಿಂಥ ಪದಗಳಲ್ಲ. ಶಾಸ್ತ್ರಗಳ ಹಂಗು ಅವಕ್ಕಿಲ್ಲ. ನಾದವೊಂದೆ ಅವುಗಳ ಗುರಿ. ಅವುಗಳ ಭಾವವೆ ಅನುಭಾವ. ಅವು ಅಸಾಮಾನ್ಯ ಪದಗಳು:

ಲಯ ಪ್ರಳಯಕೆ ಒಳಗಾಗದ ಪದವು
ನಿಲಯದೊಳು ನಿಜ ನಲಿಸುವ ಪದವು
ಒಲಿಸಿಕೊಂಡು ಶಿಶುನಾಳೇಶನು
ಸುಲಭದಿಂದ ಎನಗ್ಹೇಳದ ಪದವು

ಅವನ ಪ್ರಕಾರ ಅವನ ಪದಗಳು ಅವನವಲ್ಲ. ಶಿಶುನಾಳೇಶ ಅವನಿಗೆ ಹೇಳಿದ ಪದಗಳು. ಹಾಡುವುದು ಇವನ ಕೆಲಸ. ಹೃದಯದಲ್ಲಿ ನಿಜದ ಅರಿವನ್ನ ನಿಲ್ಲಿಸುವ ಶಕ್ತಿ ಇದೆ ಈ ಪದಗಳಿಗೆ. ಆದ್ದರಿಂದ ಅವಕ್ಕೆ ಸಾವಿಲ್ಲ.

ಅಜ್ಞಾನಿಗಳು ಅವನನ್ನು, ಅವನ ಪದಗಳನ್ನು ನಿಂದಿಸಿರಬಹುದು. ಅವರಿಗೆ ಹೀಗೆ ಹೇಳಿದ್ದಾನೆ :



ಸದ್ಗುರು ಸಾಕಿದ ಮದ್ದಾನಿ ಬರುತಿದೆ
ಎದ್ದುಹೋಗಿರಿ ಇದ್ದ ನಿಂದಕರು.
ಅಷ್ಟ ಮದಗಳಂಬೊ ಕೆಟ್ಟ ನೀಚರನ್ನು
ಸಿಟ್ಟಿಲೆ ಸೀಳುತ ಬರುತಲಿದೆ.

ತನ್ನಬಗ್ಗೆ ಅವನಿಗೆ ತನ್ನರಿವು ಇತ್ತು. 'ನಾನಾರೆಂಬುದು ನಾನಲ್ಲ' ಎಂಬ ಪದದಲ್ಲಿ ಹೀಗೆ ಹೇಳಿದ್ದಾನೆ : ಜಾತಿ ಗೋತ್ರಗಳು ನಾನಲ್ಲ. ವೇದ ಓದುಗಳು ನಾನಲ್ಲ. ನಾನಾಗಿ ನಡೆದವ ನಾನಲ್ಲ. ನಾ ಅಳಿಯದೆ ನಾ ತಿಳಿಯಲಾರದು. ನಾ ಶಿಶುನಾಳಧೀಶನ ಬಿಡಲಿಲ್ಲ. ಹೀಗೆ ಶರೀಫನಿಗೆ ಅಹಂಕಾರದ ಸೋಂಕು ಇರಲಿಲ್ಲ. ನಿರಹಂಕಾರಿ ಅವನು. ಯಾಕೆಂದರೆ ಈ ದೇಹವೇ ನಾನಲ್ಲ ಎಂಬುದು ಅವನಿಗೆ ಗೊತ್ತಿತ್ತು. ದೇಹವನ್ನು ಗುಡಿಯಂತೆ ಸ್ವಚ್ಛವಾಗಿ ಇಟ್ಟುಕೊಳ್ಳುವುದು ಗೊತ್ತಿತ್ತು. ಈ ಪ್ರಸಿದ್ಧ ಪದ ಕೇಳಿರಬೇಕಲ್ಲ ನೀವು :

ಗುಡಿಯ ನೋಡಿರಣ್ಣಾ ! ದೇಹದ
ಗುಡಿಯ ನೋಡಿರಣ್ಣಾ

'ಬಿದ್ದೀಯಬ್ಬೇ ಮುದುಕಿ' ಪದ ಆಸೆಬುರುಕತನವನ್ನು ಗೇಲಿಮಾಡುತ್ತದೆ. ಹುಲುಗೂರ ಸಂತೆಯ ಚೌಡೇರ ಬಗ್ಗೆ ಹುಷಾರಾಗಿರು ಎನ್ನುತ್ತಾನೆ. ಹ್ಞಾ! ಹುಲಗೂರಿಗೂ ಹೋಗಿಬರಬಹುದಾಗಿತ್ತು ನಾವು. ಆದರೆ ಟೈಮಾಗಿದೆ ಅಲ್ಲವಾ ?

ಬನ್ನಿ ಶಿಶುನಾಳ ಮತ್ತೆ ಬಂದೇ ಬಿಟ್ಟಿತು. ನೋಡಿ. ಶರೀಫನ ಸಮಾಧಿಗೆ ಸುಗಂಧರಾಜ ಹೂಗಳ, ಮಲ್ಲಿಗೆ ಹೂಗಳ ಹಾರದ ಅಲಂಕಾರ. ಶರೀಫ ಹಿಂದೂ ಪುರಾಣ ಇಸ್ಲಾಮಿ ಪುರಾಣ ಎರಡನ್ನೂ ಒಂದು ಮಾಡಿದಂಥವ. ಶರೀಫ ಎಗ್ಗಿಲ್ಲದೆ ಧರ್ಮಗಳನ್ನ ಒಂದುಗೂಡಿಸುವ ಪ್ರವಾದಿ. ಮನಸ್ಸುಗಳನ್ನ ಬೆಸೆಯುವ ಮನೋವೈದ್ಯ. ಜನಾಂಗಗಳ ಸಾಮರಸ್ಯ ಹುಟ್ಟಿಸುವ ಸಮಾಜಸುಧಾರಕ. ಅನುಭಾವಿ ಪರಂಪರೆಯ ದೊಡ್ಡ ಮಹಾತ್ಮ.

ಅಗೋ ಕೇಳಿ, ಹಜರೆ ಸಾಹೇಬರು ಶರೀಫನ ಸಮಾಧಿಗೆ ಆರತಿ ಎತ್ತುವ ಪದ. ಬನ್ನಿ ಹತ್ತಿರ ಹೋಗಿ ನಿಲ್ಲೋಣ. ಈ ಪದವನ್ನ ಕೇಳುತ್ತಾ ಇದ್ದರೆ ಮನಸ್ಸಿಗೆ ಎಂಥ ಶಾಂತಿ ಸಿಗುತ್ತದೆ! ಹುಲುಗೂರಿನ ಹಜರೇಶಾ ಖಾದರಲಿಂಗರನ್ನ ಇಲ್ಲಿಗೇ ಕರೆದು ತರುವ ಮೊರೆ :

ಖಾದರಿ ಸದಾವರಿ ನಿತ್ಯ ನಿರಂಜನಾವರಿ
ಪಂಚ ಪ್ರಣವ ಘೋಷನಾದ
ಮುಂಚೆ ಮೌನ ಖಾದರಿ
ಸಂಚಿತಾರ್ಥ ವಿಷಯ ಕರ್ಮ
ಪ್ರಪಂಚದೂರ ಖಾದರಿ
ಪದವಿದಾನು ಸದವಿದಾನು
ಪದವಿದೂರ ಖಾದರಿ
ಆದಿನಾದ ಮೋದನಾದ
ಹಮ್ಮನಳಿದ ಖಾದರಿ
ಮೇದಿನಿ ಸ್ಥಳದಿ ಶಿಶುನಾಳ
ಶಹಾದತ್ತ ಹಜರೇಶಾ ಖಾದರಿ

ಯಾಕೋ ನಿಮ್ಮ ಕಣ್ಣು ತುಂಬಿಬಂದಂತಿದೆ. ಅರ್ಥವಾಯಿತು ಬಿಡಿ. ಎಲ್ಲವನ್ನೂ ಹೇಳಿಯೇ ಅರ್ಥಮಾಡಿಸಬೇಕೆ? ಹೋಗಿಬನ್ನಿ ನಮಸ್ಕಾರ ಮತ್ತೆ ಸಿಗೋಣ.





ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ [illegible] ಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾ [illegible] ಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ [illegible] ಟ್ಟರು. ವಿಶ್ವವಿದ್ಯಾಲಯವು ಈ ಯೋಜನೆ [illegible] ಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು [illegible] ಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾ [illegible] ಳ ವಸ್ತು [illegible] ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗ [illegible] ತ್ಯಾದಿಗಳನ್ನು ಕುರಿತು ಸಮಿತಿಯ [illegible] ರ್ಚಿಸಿ ಯೋಜನೆಯನ್ನು ಅನುಷ್ಠಾನಗೊ [illegible]

ನವಸಾಕ್ಷರರಿಗಾಗಿ ಕನ್ನಡದಲ್ಲಿ [illegible] ಗಳಲ್ಲಿ ಈಗಾಗಲೇ [illegible] ರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿ [illegible] ಗಳನ್ನೆಲ್ಲ [illegible] ರಿಂದ ಪರಿಶೀಲಿಸಲಾಯಿತು. ಜೊತೆಗೆ [illegible] ಮಿಸಿಕೆ [illegible] ರರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾ [illegible] ದ್ಯಂತ [illegible] ಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೊ [illegible] ರು [illegible] ತರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸ [illegible] ಂದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತ [illegible] ದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ [illegible] ದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತ [illegible] ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊ [illegible] ಪ್ರತಿ [illegible] ಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿ [illegible] ಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅ [illegible] ಅವ [illegible] ಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊ [illegible]

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು